ಅಂಭೃಣೀಸೂಕ್ತಮ್

ಶ್ರೀ ವಾದಿರಾಜತೀರ್ಥಶ್ರೀಚರಣಕೃತ ವ್ಯಾಖ್ಯಾನ ಸಂವಲಿತಮ್

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ

ಅಂಭೃಣೀಸೂಕ್ತಮ್

(ಶ್ರೀವಾದಿರಾಜಶ್ರೀಚರಣವಿರಚಿತ ವ್ಯಾಖ್ಯಾನ ಸಮೇತ)

ಕನ್ನಡ ಅನುವಾದ, ವಿವರಣೆಗಳ ಸಮೇತ

ಸಂಪಾದನೆ, ಅನುವಾದ :

ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ

ಪ್ರಕಾಶನ :

ಐತರೇಯ ಪ್ರಕಾಶನ ವ್ಯಾಸನಕೆರೆ

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ಪ್ರಕಾಶನ ವಿಭಾಗ

'ಪಾಜಕ', ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್,

ಹನುಮಂತನಗರ, ಬೆಂಗಳೂರು - ೫೬೦ ೦೧೯.

Ambhṛuṇī-sūktaṁ (with the commentary of Śrī Vādirājatīrtha) : Edited with an introduction, translation and explanatory notes by Vidyāvācaspati, Darśanaratnam, Pravacanācārya, Sacchāstravicakṣaṇaratnam, Śāstrapravacanakesari, Madhvamatavardhana, Vidvaccūḍāmaṇi, Vedavidyāvicakṣaṇa, Paṇḍitaratnam, Vidyāvāridhi, Sacchāstrapravacana-pravīṇa, Gītāratnākara, Tattvavācaspati, Jnānaratnākara (and Recipient of Karnataka State Sanskrit Award-1999 & **Karnataka Rajyotsava Award-2002, Śrī Vidyāmānya Mahāpraśasti** of Śrī Pejavar Math, Udupi and **Rashtrapati Award - 2005) Dr.Vyasanakere Prabhanjanacharya**, M.A., Ph.D., D.Litt., F.I.B.R., F.U.W.A., Principal (Rtd.), Govt. First Grade College, K.R.Puram, Bangalore and Published by **Aitareya Prakāśana Vyasanakere**, Publication wing of **Śrī VyāsaMadhva Samśodhana Pratiṣṭhāna** Pājaka, No.89/24, Third Cross, Mount Joy Extension, Hanumanthanagar, Bangalore - 560019.
Pages: 64 (20 + 44)

Phone : 26602802; 26611011.

Internet : www.vyasamadhwa.org

E-mail : info@vyasamadhwa.org

First Edition : 1980
Second Edition : 1989
Third Edition : 1999
Fourth Edition : 2011

Price :

Typeset by :
Śrī Vyāsa Madhva Samśodhana Pratiṣṭhāna(Regd),

Printed at :
Sreeranga Graphics, Timber Yard Layout, Bangalore - 27. Ph: 9632727198

ಮುನ್ನುಡಿ

ಭಗವದ್ಭಕ್ತರಲ್ಲಿ ವಿಷ್ಣುಪತ್ನಿಯಾದ ಮಹಾಲಕ್ಷ್ಮಿಯ ಸ್ಥಾನ ಇತರ ಎಲ್ಲರಿಗಿಂತಲೂ ಮಿಗಿಲಾದುದು. ಬ್ರಹ್ಮರುದ್ರಾದಿದೇವತೆಗಳೂ ಸಹ ಅವರ ಕೃಪಾಕಟಾಕ್ಷದ ಹಿನ್ನೆಲೆಯಲ್ಲೇ ಶ್ರೀಹರಿಯನ್ನು ಒಲಿಸಿ, ತಮ್ಮ ಸಾಧನೆಯನ್ನು ಪೂರೈಸಿ ಮುಕ್ತಿ ಪಡೆಯುವರು. ಮಹಾಲಕ್ಷ್ಮಿಯು ಭಾಗ್ಯದ ದೇವತೆ[1]; ಅವರ ಉಪಾಸನೆಯಿಂದ ಲಭಿಸುವ ಭಾಗ್ಯ ಭಗವತ್ಪೂಜೆಗೆ ಅತ್ಯಗತ್ಯ

ಆದ್ದರಿಂದಲೇ ಬ್ರಹ್ಮಾದಿದೇವತೆಗಳಿಂದ ಆರಂಭಿಸಿ, ತೃಣಜೀವರವರೆಗಿನ ಸಾಧಕ-ರಿಗೆಲ್ಲ ಮಹಾಲಕ್ಷ್ಮಿಯ ಆರಾಧನೆಯು ವಿಹಿತವಾಗಿದೆ. ಮಹಾಲಕ್ಷ್ಮಿಯು ಅವ್ಯಕ್ತತ್ತ್ವದ ಅಭಿಮಾನಿದೇವತೆ. ಅವ್ಯಾಕೃತಾಕಾಶಕ್ಕೂ ಅಭಿಮಾನಿದೇವತೆ; ಸಕಲಶ್ರುತಿತತಿಗಳಿಗೂ ಮುಖ್ಯವಾದ ಅಭಿಮಾನಿನಿ. ಬ್ರಹ್ಮಾದಿದೇವತೆಗಳ ಸ್ವರೂಪ, ಪ್ರಮಿತಿ, ಪ್ರವೃತ್ತಿಗಳು ಭಗವದಧೀನವಾಗಿರುವಂತೆ ಮಹಾಲಕ್ಷ್ಮಿಯ ಆಧೀನ್ಯಕ್ಕೂ ಒಳಪಟ್ಟಿವೆ. ಭಗವದು-ಪಾಸನೆಯಂತೆ ಲಕ್ಷ್ಮ್ಯುಪಾಸನೆಯೂ ಮೋಕ್ಷಸಾಧಕ. ಶ್ರೀಹರಿಯು ಜಗತ್ತಿನ ತಂದೆ-ಯಾದರೆ, ಮಹಾಲಕ್ಷ್ಮಿಯು ಬ್ರಹ್ಮರುದ್ರಾದಿದೇವತೆಗಳನ್ನು ಒಳಗೊಂಡಿರುವ ಸಮಸ್ತ-ವಿಶ್ವಕ್ಕೆ ತಾಯಿ ಎನ್ನಿಸಿರುವಳು. ಗುಣತ್ರಯಗಳ ಅಭಿಮಾನಿಯಾದ ಅವರು ನಿತ್ಯಮುಕ್ತಳೆನಿಸಿದ್ದು ಸರ್ವಪೂಜ್ಯೆಯಾಗಿರುವಳು. ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ಮಹಾಲಕ್ಷ್ಮಿಯ ಮೋಕ್ಷದಾತೃತ್ವವು ನಿರೂಪಿತವಾಗಿದೆ. ಅವರು ಭಗವತ್ಸೇವೆಗಾಗಿ ಸೀತಾ, ರುಗ್ಮಿಣೀ, ಸತ್ಯಭಾಮಾದಿರೂಪಗಳಿಂದ ಕಾಲಕಾಲಕ್ಕೆ ಅವತರಿಸಿ, ಶ್ರೀಹರಿಯ ವಿಶೇಷಸೇವೆಯನ್ನು ಮಾಡುವರು. ಶ್ರೀ, ಭೂ ಹಾಗೂ ದುರ್ಗಾ ಎಂಬ ಮೂರುರೂಪಗಳಿಂದ ಇವರು ಕ್ರಮವಾಗಿ ಸತ್ತ್ವ, ರಜಸ್ಸು ಹಾಗೂ ತಮಸ್ಸು ಎಂಬ ಗುಣತ್ರಯಗಳಿಗೆ ಅಭಿಮಾನಿಯಾಗಿರುವರು.

ಸೀತೆಯಾಗಿ ತ್ರೇತಾಯುಗದಲ್ಲಿ ಪ್ರಾದುರ್ಭವಿಸಿ, ಶ್ರೀರಾಮ ತನ್ನ ಪತಿ ಎಂಬುದನ್ನು ನಿರೂಪಿಸುತ್ತ, ತಾನು ಮಹಾಲಕ್ಷ್ಮಿ ಎಂಬುದನ್ನು ನಿರೂಪಿಸಿವರು. ದ್ವಾಪರಯುಗದಲ್ಲಿ ತನ್ನ ಶ್ರೀರೂಪದಿಂದ ರುಗ್ಮಿಣಿಯಾಗಿಯೂ, ಭೂರೂಪದಿಂದ ಸತ್ಯಭಾಮೆಯಾಗಿಯೂ, ದುರ್ಗಾರೂಪದಿಂದ ನಂದಗೋಪಪುತ್ರಿತ್ವೇನ ದುರ್ಗೆಯಾಗಿಯೂ ಅವತರಿಸಿರುವರು. ಹೀಗೆ ರೂಪತ್ರಯದಿಂದಲೂ ದ್ವಾಪರಯುಗದಲ್ಲಿ ಏಕಕಾಲದಲ್ಲಿ ಶ್ರೀಹರಿಯನ್ನು ಸೇವಿಸಿದ್ದು ಇವರ ಹಿರಿಮೆ. ಇವರು ಪ್ರಲಯಕಾಲದಲ್ಲೂ ಲಯವನ್ನು ಹೊಂದದೆ, [2]ಭಗವದಾಲಿಂಗಿತರಾಗಿರುವರು.

---

೧. **'ದೇವೀ ಭಾಗ್ಯಾತ್ಮಿಕಾ ನೃಣಾಮ್'** – ಮಹಾಭಾರತತಾತ್ಪರ್ಯನಿರ್ಣಯಃ(೩/೭)

ಇಷ್ಟಂ ದೈವಂ ಹರಿಃ **ಸಾಕ್ಷಾಲ್ಲಕ್ಷ್ಮೀರ್ಭಾಗ್ಯಸ್ಯ ದೇವತಾ ।**
ಗುರುರ್ಬ್ರಹ್ಮಾSಥ ವಾಯುರ್ವಾ ವಿದ್ಯಾ ದೇವ್ಯೌ ಪ್ರಕೀರ್ತಿತೇ ॥
ತಸ್ಮಾದೇತೇ ಪ್ರಿಯಾ ವಿಷ್ಣೋರಂತರಂಗತಯಾ ಸದಾ ।
ಜ್ಞೇಯಾಶ್ಚೈವ ಪ್ರಪೂಜ್ಯಾಶ್ಚ ವಿಷ್ಣೋಃ ಪ್ರೀತಿಮಭೀಪ್ಸತಾ ॥
– ತಂತ್ರಸಾರಸಂಗ್ರಹಃ (೪/೭೪.೭೫)

೨. **ಲಕ್ಷ್ಮೀಭುಜಾಂತರಗತಃ ಸ್ವರತೋSಪಿ ಚಾಗ್ರೇ** – ಮಹಾಭಾರತತಾತ್ಪರ್ಯನಿರ್ಣಯಃ(೧/೨)

ನಿತ್ಯಮುಕ್ತರಾದ್ದರಿಂದಲೇ ಇವರಿಗೂ ಸಹ ಎಂದೂ ಪ್ರಾಕೃತದೇಹ ಇರುವುದಿಲ್ಲ. ಆದ್ದರಿಂದಲೇ ಭಗವದ್ಗೀತೆಯಲ್ಲಿ ಬಂದಿರುವ ಭಗವದ್ವೈಭವದಂತೆ ಇವರ ಜನ್ಮ ಹಾಗೂ ಕರ್ಮಗಳು ಸಹ ದಿವ್ಯ ಎನ್ನಿಸಿವೆ; ನಿತ್ಯಮುಕ್ತರಾದ ಇವರಿಗೆ ಅಜ್ಞಾನಾದಿ-ದೋಷಗಳ ಪ್ರಸಕ್ತಿ ಯಾವ ಕಾಲಕ್ಕೂ ಸರ್ವಥಾ ಇರುವುದಿಲ್ಲ. ಶ್ರೀಹರಿಯ ಹೊರತು ಬ್ರಹ್ಮಾದಿಸಮಸ್ತವಿಶ್ವವನ್ನು ಕರತಲಾಮಲಕದಂತೆ ಅತ್ಯಂತ ಸ್ಫುಟವಾಗಿ ತಿಳಿಯುವ ಅನನ್ಯವಾದ ಜ್ಞಾನವೈಭವ ಇವರದು[೧].

ಸೀತಾ ಮೊದಲಾದ ಅವತಾರರೂಪಗಳಲ್ಲೂ ಸಹ ಅವರು ಶ್ರೀಹರಿಯಂತೆ ಪೂರ್ಣರು. ರಾವಣಾದಿಗಳಿಂದ ಸೀತೆಯು ಅಪಹೃತಳಾಗಿ ದುಃಖಿಸಿದಳು ಎಂಬುದು ಕೇವಲ ಅಸುರಮೋಹನಕ್ಕಾಗಿಯೇ ಹೊರತು ವಸ್ತುಸ್ಥಿತಿಯಲ್ಲ. ಈ ಸಂದರ್ಭದಲ್ಲಿ ಅವರು ಪಾರ್ವತೀಪರಮೇಶ್ವರರಿಂದ ಆರಾಧಿತರಾಗಿ ಕೈಲಾಸಪರ್ವತದಲ್ಲಿ ಒಂದು ವರ್ಷ ನೆಲೆಸಿದ್ದರು ಎಂಬ ಮಾತು ವಾಮನಪುರಾಣದಲ್ಲಿ ಬಂದಿದೆ. ಶ್ರೀಮದಾ-ಚಾರ್ಯರು ತಮ್ಮ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಇವನ್ನೆಲ್ಲ ಸಾಧಾರವಾಗಿ ನಿರೂಪಿಸಿರುವರು. ಆ ಕಾಲದಲ್ಲಿ ಸೀತಾಕೃತಿಯಲ್ಲಿದ್ದು ಶ್ರೀಸೀತಾರಾಮರ ಸೇವೆ ಮಾಡಿದ್ದು ಇಂದ್ರದೇವರು ಎಂಬುದನ್ನೂ ಸಹ ಅವರು ನಿರ್ಣಯಿಸಿರುವರು[೨].

ಇದರಂತೆ ರುಗ್ಮಿಣೀರೂಪದಲ್ಲೂ ಸತ್ಯಭಾಮಾರೂಪದಲ್ಲೂ ಅಸಾಧಾರಣವಾದ ರೀತಿಯಲ್ಲಿ ಶ್ರೀಹರಿಯನ್ನು ಆರಾಧಿಸಿರುವರು. ದುರ್ಗಾರೂಪದಿಂದ ಕಲಿಯುಗದಲ್ಲಿ ಮತ್ತೊಮ್ಮೆ ಅವತರಿಸಿ, ದುಷ್ಟರನ್ನೆಲ್ಲ ಸದೆಬಡಿದು ಶಿಷ್ಟರಿಗೆ ತತ್ತ್ವಜ್ಞಾನಪ್ರಾಪ್ತಿಗೆ ಅವಕಾಶಕಲ್ಪಿಸುವರು ಎಂಬ ವಿಶೇಷಾಂಶವನ್ನು ಶ್ರೀಮದಾಚಾರ್ಯರು ತಮ್ಮ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ನಿರೂಪಿಸಿರುವರು (೩೨/೧೬೧) :

ದುರ್ಗಾ ಪುನರ್ವಿಪ್ರಕುಲೇಽವತೀರ್ಣಾ ಹನಿಷ್ಯತಿ ವ್ರಾತಮಥಾಸುರಾಣಾಮ್ ॥

ಮೂಲರೂಪದಿಂದಲೂ ಶ್ರೀಹರಿಯನ್ನು ಸರ್ವಾತ್ಮನಾ ಅತ್ಯಂತ ಅಸಾಧಾರಣ-ರೀತಿಯಲ್ಲಿ ಆರಾಧಿಸುವ ಮಹಾಮಹಿಮರು ಇವರು :

ಶ್ರೀರ್ಯತ್ರ ರೂಪಿಣ್ಯುರುಗಾಯಪಾದಯೋಃ
ಕರೋತಿ ಮಾನಂ ಬಹುಧಾ ವಿಭೂತಿಭಿಃ ।

---

೧. ಈಶ್ವರಾದನ್ಯತ್ರ ಅನಾಲೋಚನೇ ಸರ್ವವಿಷಯಂ ಮಹಾಲಕ್ಷ್ಮೀಜ್ಞಾನಮ್ । -ಪ್ರಮಾಣಪದ್ಧತಿ

೨. ತಸ್ಯಾಃ ಸಮೀಪಮಥ ರಾವಣ ಆಸಸಾದ
ಸಾಽದೃಶ್ಯತಾಮಾಗಮದಪ್ಯವಿಷಹ್ಯಶಕ್ತಿಃ ।
ಸೃಷ್ಟ್ವಾಽಽತ್ಮನಃ ಪ್ರತಿಕೃತಿಂ ಪ್ರಯಯೌ ಚ ಶೀಘ್ರಂ
ಕೈಲಾಸಮರ್ಚಿತಪದಾ ನ್ಯವಸಚ್ಛಿವಾಭ್ಯಾಮ್ ॥
ತಸ್ಯಾಸ್ತು ತಾಂ ಪ್ರತಿಕೃತಿಂ ಪ್ರವಿವೇಶಶಕ್ರಃ
ದೇವ್ಯಾಶ್ಚ ಸನ್ನಿಧಿಯುತಾಂ ವ್ಯವಹಾರಸಿದ್ಧ್ಯೈ ॥

ಪ್ರೇಂಖಶ್ರಿತಾ ಯಾಃ ಕುಸುಮಾಕರಾನುಗೈ-
ರ್ವಿಗೀಯಮಾನಾ ಪ್ರಿಯಕರ್ಮ ಗಾಯತೀ ॥ – ಭಾಗವತ (೨/೯/೧೧)

ಸ್ವಯಮಿಂದಿರೈವ ಪತಿಮಾನಕರೀ ಗೃಹಕರ್ಮ ಯತ್ರ ಕುರುತೇ ಸುತರಾಮ್ ।
ಅಪಿ ಕಿಂಕರೀದಶಶತೀಮಹಿತಾ ಶ್ರಿಯಮತ್ರ ವರ್ಣಯತಿ ವೇಶ್ಮನಿ ಕಃ ॥
– ಸುಮಧ್ವವಿಜಯ (೧೧/೧೬)

ಇವುಗಳ ಭಾವವನ್ನೇ ಶ್ರೀಪುರಂದರದಾಸರು 'ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ' ಎಂಬುದಾಗಿ ಹಾಡಿರುವರು.

ಮಹಾಲಕ್ಷ್ಮೀ ಉಪಾಸನೆಯನ್ನು ಪ್ರತ್ಯೇಕವಾಗಿ ಮಾಡುವುದು ಅವರ ಅನುಗ್ರಹಕ್ಕೆ ಕಾರಣವಾಗುವ ಬದಲು ನಿಗ್ರಹಕ್ಕೆ ಕಾರಣವಾಗುವುದು. ಆದ್ದರಿಂದ ಶ್ರೀನಾರಾಯಣನ ಸಮೇತವೇ ಮಹಾಲಕ್ಷ್ಮಿಯನ್ನು ಆರಾಧಿಸುವುದು ಶಾಸ್ತ್ರವಿಹಿತವಾದ ವಿಧಿ ಎಂಬ ವಿಶೇಷಾಂಶವನ್ನು ಶ್ರೀಮಧ್ವಾಚಾರ್ಯರು ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿರುವರು[೧]. ಈ ಎಚ್ಚರಿಕೆಯ ಹಿನ್ನೆಲೆಯಲ್ಲಿ ಮಹಾಲಕ್ಷ್ಮಿಯನ್ನು ಆರಾಧಿಸಬೇಕು[೨] ಎಂಬುದನ್ನು ಸಾಧಕರು ಗಮನಿಸಬೇಕು. ಇಂದು ಲಕ್ಷ್ಮಿಯ ಆರಾಧನೆ ಮಾಡದ ಜನರೇ ಇಲ್ಲ. ಶ್ರೀವಾದಿರಾಜಸ್ವಾಮಿಗಳು ಇಂತಹವರ ಪ್ರವೃತ್ತಿಯನ್ನು 'ಹಣವಿಲ್ಲದವನೊಬ್ಬ ಹೆಣಕಿಂತ ಕಡೆಯಯ್ಯಾ' ಎಂದು ಮಾರ್ಮಿಕವಾಗಿ ಖಂಡಿಸಿರುವರು. ಲಕ್ಷ್ಮಿಯನ್ನು ಪ್ರತ್ಯೇಕವಾಗಿ ಆರಾಧಿಸದೆ, ನಾರಾಯಣಸಮೇತಳನ್ನಾಗಿಯೇ ಆರಾಧಿಸಬೇಕೆಂಬುದು ಶಾಸ್ತ್ರತತ್ತ್ವ. ಹನುಮಂತನು ಸೀತೆಯನ್ನು ಶ್ರೀರಾಮಪತ್ನಿಯೆಂದು ಆರಾಧಿಸಿ, ಅವರಿಬ್ಬರ ಅನುಗ್ರಹಕ್ಕೂ ಪಾತ್ರನಾಗಿರುವುದು ಇದಕ್ಕೆ ಶ್ರೇಷ್ಠನಿದರ್ಶನ. ಲಕ್ಷ್ಮೀಪತಿಯನ್ನು ಬಿಟ್ಟು ಲಕ್ಷ್ಮಿಯನ್ನು ಮಾತ್ರ ಆರಾಧಿಸುವುದು ರಾವಣನು ಸೀತೆಯನ್ನು ಬಯಸಿದಂತೆ ಸರ್ವಥಾ ಅನರ್ಥಕರ.

ಜ್ಯೇಷ್ಠಲಕ್ಷ್ಮಿಯೆಂಬುದಾಗಿ ಪ್ರಸಿದ್ಧಳಾಗಿರುವ ಅಲಕ್ಷ್ಮಿಯ ಉಪಾಸನೆ ಅನರ್ಥಕರ. ಮಹಾಲಕ್ಷ್ಮಿ ವಿಷ್ಣುಪತ್ನಿಯಾದರೆ, ಅಲಕ್ಷ್ಮಿಯು ಕಲಿಯ ಪತ್ನಿ. ಆದ್ದರಿಂದ ಶ್ರೀಭಾರತೀ-ರಮಣಮುಖ್ಯಪ್ರಾಣಾಂತರ್ಗತನಾದ ಮಹಾವಿಷ್ಣುವಿನ ಪತ್ನಿ ಎಂಬುದಾಗಿ ಉಪಾಸನೆ ಮಾಡಿದಾಗಲೇ ಅದು ನಿಜವಾದ ಮಹಾಲಕ್ಷ್ಮಿಯ ಉಪಾಸನೆಯಾಗಿ, ಸಕಲವಿಧ ಇಹಪರಗಳ ಕಲ್ಯಾಣಕ್ಕೂ, ಮೋಕ್ಷಪ್ರಾಪ್ತಿಗೂ ಸಾಧನವಾಗುತ್ತದೆ ಎಂಬ ಮತ್ತೊಂದು ವಿಶೇಷಾಂಶವನ್ನೂ ಜಿಜ್ಞಾಸುಗಳು ಗಮನಿಸಬೇಕು.

---

೧. ಕ್ಲೇಶೋಽಧಿಕತರಸ್ತೇಷಾಮವ್ಯಕ್ತಚೇತಸಾಂ –ಭಗವದ್ಗೀತಾ ೧೨-೫
ಯತಃ ಕ್ಲೇಶೋಽಧಿಕಸ್ತೇಷಾಂ ಪೃಥಕ್ ಶ್ರಿಯಮುಪಾಸತಾಮ್ –ಗೀತಾತಾತ್ಪರ್ಯ ೧೨-೫

೨. ಮಹಾಲಕ್ಷ್ಮಿಯನ್ನು ಕುರಿತ ವೈಷ್ಣವಪರಂಪರೆಯ ಸ್ತೋತ್ರಗಳ ಸಂಕಲನವನ್ನು "ಲಕ್ಷ್ಮೀ-ಸ್ತೋತ್ರಮಾಲಿಕಾ (ಸ್ತೋತ್ರಮಾಲಿಕಾ ಭಾಗ - ೭)" ಎಂಬುದಾಗಿ ನಮ್ಮ ಪ್ರಕಾಶನವು ಹೊರತಂದಿದೆ.

೧. ಅಂಭೃಣೀಸೂಕ್ತ

ಲಕ್ಷ್ಮೀತತ್ತ್ವದ ಮಹತ್ತ್ವವನ್ನು ತಿಳಿಸಿಕೊಡುವ ಪ್ರಮುಖ ವೈದಿಕ ಸೂಕ್ತಗಳಲ್ಲಿ ಅಂಭೃಣೀ ಸೂಕ್ತ ಮತ್ತು ಶ್ರೀಸೂಕ್ತಗಳು ತುಂಬಾ ಮುಖ್ಯವಾಗಿವೆ. ಇವುಗಳಲ್ಲಿ ಅಂಭೃಣೀ ಸೂಕ್ತವು ಋಗ್ವೇದದ ಹತ್ತನೆಯ ಮಂಡಲದ ೧೨೫ನೆಯ ಸೂಕ್ತವಾಗಿದೆ. ಈ ಸೂಕ್ತದ ಬಗ್ಗೆ ''**ಅಂಭೃಣೀ ವಾಗಾತ್ಮಾನಂ ತುಷ್ಟಾವ**'' : ಎಂಬುದಾಗಿ ನಿರುಕ್ತವೂ ''**ಅಹಮಷ್ಟೌ ವಾಗಂಭೃಣೀ ತುಷ್ಟವಾತ್ಮಾನಂ ದ್ವಿತೀಯಾ ಜಗತೀ**'' ಎಂಬುದಾಗಿ ಅನುಕ್ರಮಣಿಕೆಯೂ ಇವೆ. ''**ಅಹಂ ವಾಕ್ಸೂಕ್ತಂ**'' ಎಂಬುದಾಗಿ ಬೃಹದ್ದೇವತಾ ಗ್ರಂಥದಲ್ಲಿದೆ. ಅಂಭೃಣೀ ಶಬ್ದಕ್ಕೆ ''**ಅಂ ಬಿಭರ್ತಿ ನಯತಿ ಚ**'' ಎಂಬ ವ್ಯುತ್ಪತ್ತಿಯಿಂದ ಲಕ್ಷ್ಮೀ ಎಂದು ಅರ್ಥವಾಗುತ್ತದೆ ಎಂದು ವಾದಿರಾಜಸ್ವಾಮಿಗಳು ತಮ್ಮ ವ್ಯಾಖ್ಯಾನದಲ್ಲಿ ಸಮರ್ಥಿಸಿದ್ದಾರೆ. ಅಂಭೃಣೀ ಎಂಬುದು ಮಹಾಲಕ್ಷ್ಮಿಯ ಪ್ರಮುಖರೂಪಗಳಲ್ಲಿ ಒಂದು ಎಂಬುದು ಶ್ರೀಮದಾನಂದತೀರ್ಥಭಗವತ್ಪಾದರು ತಮ್ಮ ಬೃಹದಾರಣ್ಯ-ಕೋಪನಿಷದ್ಭಾಷ್ಯ ಗ್ರಂಥದಲ್ಲಿ ಉದಾಹರಿಸಿರುವ ''**ಶ್ರೀರ್ಭೂರ್ದುರ್ಗಾ[1]ಂಭೃಣೀ ಹ್ರೀಶ್ಚ ಮಹಾಲಕ್ಷ್ಮೀಶ್ಚ ದಕ್ಷಿಣಾ**'' ಎಂಬ ಪೈಂಗಿಶ್ರುತಿಯ ಮಾತಿನಿಂದ ತಿಳಿಯುತ್ತದೆ. ಅಂಭೃಣೀ ಎಂಬ ಹೆಸರಿನ [2]ಬೇರಾವ ವ್ಯಕ್ತಿಯೂ ವೈದಿಕವಾಙ್ಮಯದಲ್ಲಾಗಲಿ, ಇತಿಹಾಸ ಪುರಾಣಗಳಲ್ಲಾಗಲಿ ಕಂಡುಬರುವುದಿಲ್ಲ. ವಾಕ್ ಎಂದರೆ ವಾಗಭಿಮಾನಿನೀ ಎಂದು ಅರ್ಥ. ಸಕಲವೇದಗಳಿಗೂ ಮುಖ್ಯಾಭಿಮಾನಿನಿಯು ಮಹಾಲಕ್ಷ್ಮಿಯೇ. ಮಹಾಲಕ್ಷ್ಮಿಯೇ ಅಂಭೃಣೀ ಶಬ್ದವಾಚ್ಯಳು ಎಂಬುದನ್ನು ಇದೂ ಸಹ ಪುಷ್ಟೀಕರಿಸುತ್ತದೆ. ಶ್ರೀಮದಾಚಾರ್ಯರು ತಮ್ಮ ತಂತ್ರಸಾರಸಂಗ್ರಹ ಗ್ರಂಥದಲ್ಲಿ ''**ಸ್ವದೃಷ್ಟಂ ...ವಾಚೋಽಂಭೃಣ್ಯಾಃ ಶ್ರಿಯಃ**''(೪-೫೫) ಎಂದು ಸ್ಪಷ್ಟವಾಗಿ ಅಂಭೃಣೀ ಎಂದರೆ ಲಕ್ಷ್ಮೀ ಎಂದೇ ಹೇಳಿದ್ದಾರೆ. ಅಂಭೃಣೀ ರೂಪದ ಬಗ್ಗೆ ''ಸೃಷ್ಟಿ ಮಾಡೋ ಉದ್ದಿಶ್ಯ

---

೧. ''ಗುಣತ್ರಯಗಳ ಮಾನಿ ಶ್ರೀ ಕುಂ-। ಭಿಣಿ ಮಹಾದುರ್ಗಾಂಭೃಣೀರು-
ಗ್ಮಿಣಿಯು ಸತ್ಯ ಶಾಂತಿ ಕೃತಿ ಜಯ ಮಾಯೆ ಮಹಾಲಕುಮಿ ॥
ಜನಕಜಾ ಕಮಲಾಲಯ ದ। ಕ್ಷಿಣೆಯು ಪದ್ಮಾತ್ರಿಲೋಕೇಶ್ವರಿ।
ಅಣುಮಹತ್ತಿನೊಳಿದ್ದು ಉಪಮಾರಹಿತಳೆನಿಸುವಳು।''

– ಹರಿಕಥಾಮೃತಸಾರ (ಬೃಹತ್ತಾರತಮ್ಯ ಸಂಧಿ - ಪದ್ಯ ೪)

೨. 'ಅಂಭೃಣ ಎಂಬ ಒಬ್ಬ ಋಷಿಯ ಮಗಳಾದ ವಾಕ್ ಎಂಬುವಳು ಈ ಸೂಕ್ತದಲ್ಲಿ ತನ್ನನ್ನು ಸ್ತುತಿಸಿಕೊಂಡಿದ್ದಾಳೆ' ಎಂಬುದಾಗಿ ಸಾಯಣಭಾಷ್ಯದಲ್ಲಿದೆ. ಆದರೆ ಯಾವ ಆಕರದಲ್ಲೂ ಅಂಭೃಣ ಎಂಬ ಋಷಿಯ ಹೆಸರು ಕೇಳಿಬರುವುದಿಲ್ಲ. ಸಾಯಣರು ಅದಕ್ಕೆ ಯಾವ ಆಧಾರವನ್ನೂ ಕೊಟ್ಟಿಲ್ಲ. ಅಲ್ಲದೆ ಒಬ್ಬ ಸಾಮಾನ್ಯ ಋಷಿಪುತ್ರಿಗೆ ಬ್ರಹ್ಮರುದ್ರಾದಿ ಸ್ರಷ್ಟೃತ್ವ, ನಿಯಾಮಕತ್ವ ಮೊದಲಾದ ಗುಣಗಳು ಸಂಭಾವ್ಯವೂ ಆಗುವುದಿಲ್ಲ. ಅಂಭೃಣ ಎಂಬ ಋಷಿಯ ಮಗಳೆ ಇದಕ್ಕೆ ದ್ರಷ್ಟವಾಗಿದ್ದಲ್ಲಿ 'ಮಮ ಯೋನಿರಪ್ಸ್ವಂತಃ ಸಮುದ್ರೇ' ಎಂದು ಹೇಳಿಕೊಳ್ಳುವುದು ಸಹ ವಿರುದ್ಧವೇ ಆಗುತ್ತದೆ. ಪೈಂಗಿಶ್ರುತಿ ಮೊದಲಾದ ಪ್ರಮಾಣಗಳು ಸಹ ವಿರೋಧಿಸುತ್ತವೆ. ಆದ್ದರಿಂದ ಇಲ್ಲಿಯ ಸಾಯಣಭಾಷ್ಯವು ಸರಿಯಲ್ಲ ಎಂಬುದು ಸ್ಪಷ್ಟ

ಪರಮಾತ್ಮನ್ನ ಸ್ತೋತ್ರಮಾಡಿದ ಲಕ್ಷ್ಮೀದೇವರ ರೂಪ'' ಎಂಬ ವಿಶೇಷ ವಿವರವನ್ನು ಸಂಕರ್ಷಣ ಒಡೆಯರು ಹರಿಕಥಾಮೃತಸಾರ ವ್ಯಾಖ್ಯಾನದಲ್ಲಿ ಕೊಟ್ಟಿದ್ದಾರೆ.

ಅಂಭೃಣೀ ಸೂಕ್ತಕ್ಕೆ ದ್ರಷ್ಟೃ(ಋಷಿ)ವು ಅಂಭೃಣಿಯೇ ಆದ್ದರಿಂದ ಅಂಭೃಣೀ ಶಬ್ದವಾಚ್ಯಳಾದ ಮಹಾಲಕ್ಷ್ಮೀಯೇ ಈ ಸೂಕ್ತದ ಋಷಿ. ಈ ಸೂಕ್ತದ ಪ್ರತಿಪಾದ್ಯ ದೇವತೆಯು ''ಆತ್ಮಾ'' ಎಂದಿದೆ. ಇದರ ಮೊದಲ ಆರು ಋಕ್ಕುಗಳಲ್ಲಿ ಲಕ್ಷ್ಮೀದೇವಿಯ ಮಹಿಮೆಯೂ ಅನಂತರದ ಎರಡು ಋಕ್ಕುಗಳಲ್ಲಿ ಪರಮಾತ್ಮನ ಮಹಿಮೆಯೂ ವರ್ಣಿತವಾಗಿವೆ. ಆದ್ದರಿಂದ ಇಲ್ಲಿಯ ಆತ್ಮಶಬ್ದಕ್ಕೆ ''ತಾನು'' ಎಂದರೆ ಲಕ್ಷ್ಮೀ ಎಂದೂ, ''ಪರಮಾತ್ಮ'' ಎಂದರೆ ನಾರಾಯಣ ಎಂದೂ ಅರ್ಥವಾಗುತ್ತದೆ. ಆದ್ದರಿಂದ ಲಕ್ಷ್ಮೀನಾರಾಯಣರು ಈ ಸೂಕ್ತಕ್ಕೆ ದೇವತೆಗಳು (ಪರಮ ಮುಖ್ಯವೃತ್ತಿಯಿಂದ ಸಕಲವೇದಗಳಿಗೂ ಹೇಗೋ ಹಾಗೆಯೇ ನಾರಾಯಣನು ಮಾತ್ರವೇ ಈ ಸೂಕ್ತಕ್ಕೂ ಪ್ರತಿಪಾದ್ಯದೇವತೆ ಎಂಬುದನ್ನು ಸಹ ಇಲ್ಲಿ ಗಮನಿಸಬೇಕು). ಈ ಸೂಕ್ತದಲ್ಲಿ ಒಟ್ಟು ಎಂಟು ಋಕ್ಕುಗಳಿದ್ದು, ಅವುಗಳಲ್ಲಿ ಎರಡನೆಯದು ಜಗತೀ ಛಂದಸ್ಸಿನಲ್ಲಿದೆ. ಉಳಿದ ಏಳು ಋಕ್ಕುಗಳ ಛಂದಸ್ಸು ತ್ರಿಷ್ಟುಪ್.

''ಮಹಾಲಕ್ಷ್ಮಿಯು[1] ಬ್ರಹ್ಮ, ರುದ್ರ, ಮೊದಾಲಾದ ಎಲ್ಲಾ ದೇವತೆಗಳ ಸೃಷ್ಟಿ, ಸ್ಥಿತಿ, ಲಯಾದಿಗಳಿಗೆ ಕಾರಣಳೂ ಐಶ್ವರ್ಯಪ್ರದಳೂ ಆಗಿದ್ದಾಳೆ ; ಅದೇ ರೀತಿ ಜಗತ್ತಿನ ಎಲ್ಲಾ ವ್ಯಾಪಾರಗಳಿಗೆ ನಿಯಾಮಕಳೂ, ರಾಷ್ಟ್ರಕ್ಕೆ ಅಭಿಮಾನಿಯಾಗಿದ್ದು ದ್ರವ್ಯಾದಿ-ದಾಯಕಳಾಗಿರುವವಳೂ ಆಕೆಯೇ[2] ; ಮೋಕ್ಷ ಕೊಡುವ ಸಾಮರ್ಥ್ಯವೂ ಕೂಡ ಲಕ್ಷ್ಮೀದೇವಿಗೆ ಉಂಟು ; ಆದರೆ ಮಹಾಲಕ್ಷ್ಮಿಯ ಈ ಎಲ್ಲಾ ಹಿರಿಮೆಗೂ ಕಾರಣ-ಪುರುಷನಾದ ಪರದೇವತೆಯು ಸಾಕ್ಷಾತ್ ನಾರಾಯಣನೇ ಆಗಿದ್ದಾನೆ. ಲಕ್ಷ್ಮಿಯ ಎಲ್ಲಾ ಕಾರ್ಯಗಳನ್ನೂ ಮುಖ್ಯವಾಗಿ ಮಾಡುವವನೂ ಸಹ ಅವನೇ. ಅವನು ಮಹಾಲಕ್ಷ್ಮಿಯ ಶ್ರೀರೂಪ ಭೂರೂಪಗಳಿಗಿಂತಲೂ ಶ್ರೇಷ್ಠನಾಗಿರುವ ಸರ್ವೋತ್ತಮ-ದೇವತೆ ; ಅವನ ಮಹಿಮೆಗೆ ಪಾರವೇ ಇಲ್ಲ'' ಎಂಬುದು ಈ ಸೂಕ್ತದ ಸಾರಾಂಶ.

ಇದರಲ್ಲಿ ''**ಅಹಮೇವ ವಾತ ಇವ ಪ್ರವಾಮಿ**'' ಎಂಬಲ್ಲಿ ಮುಖ್ಯಪ್ರಾಣನ ಮಹಿಮೆಯೂ ಸಹ ಬಂದಿದೆ. ರುದ್ರರು, ಆದಿತ್ಯರು, ವಿಶ್ವೇದೇವತೆಗಳು, ಇಂದ್ರಾಗ್ನಿ-ಗಳು ಮೊದಲಾಗಿ ಎಲ್ಲಾ ಮುಖ್ಯದೇವತೆಗಳ ಉಲ್ಲೇಖ ಮತ್ತು ಮಹಿಮೆಗಳು ಸಹ

೧. (೧) ''ಶ್ರೀಯಂ ಲೋಕೇ ದೇವಜುಷ್ಟಾಮುದಾರಾಂ'' ಇತಿ ಶ್ರೀಸೂಕ್ತೇ ।
(೨) ತ್ವಯಾ ಜುಷ್ಟಃ ಸ ಋಷಿರ್ಭವತಿ ದೇವಿ
ತ್ವಯಾ ಬ್ರಹ್ಮಾಗತಶ್ರೀರುತ ತ್ವಯಾ ॥(ತೈತ್ತರೀಯ ಅರಣ್ಯಕ - ೧೦/೩೯/೪೨-೨)
- ಮೇಧಾಸೂಕ್ತ (ಗೀತಾಭಾಷ್ಯೋದಾಹೃತೇ ಅ.೧೨)

೨. ಉಪಾಸಿತಾ ಮುಕ್ತಿದಾ ಸದ್ಯ ಏವ
ಹ್ಯಸ್ಯೇಶಾನಾ ಜಗತೋ ವಿಷ್ಣುಪತ್ನೀ ।
ಯಾ ಶ್ರೀರ್ಲಕ್ಷ್ಮೀರೌಪಲಾ ಚಾಂಬಿಕೇತಿ
ಹ್ರೀಶ್ಚೇತ್ಯುಕ್ತಾ ಸಂವಿದಗ್ರ್ಯಾ ಸುವಿದ್ಯಾ ॥ - ಗೀತಾತಾತ್ಪರ್ಯೋದಾಹೃತ ಶ್ರುತಿಃ (ಅ.೧೨)

ಇದರಲ್ಲಿ ಬಂದಿವೆ. ಹೀಗಾಗಿ ಇದು ಋಗ್ವೇದದ ಮಹತ್ತ್ವದ ಸೂಕ್ತಗಳಲ್ಲಿ ಒಂದಾಗಿದೆ ಎಂಬುದು ಸ್ಪಷ್ಟ. ಲಕ್ಷ್ಮೀನಾರಾಯಣರ ಮಹತ್ತ್ವವನ್ನು ಒಟ್ಟಾಗಿಯೇ ಪ್ರತಿಪಾದಿಸುವ ಈ ಸೂಕ್ತವು ಅವರಿಬ್ಬರ ಅವಿನಾಭಾವ ಸಂಬಂಧವನ್ನು ಕೂಡ ತಿಳಿಸಿಕೊಡುತ್ತದೆ. ನಾರಾಯಣನನ್ನು ಬಿಟ್ಟು ಲಕ್ಷ್ಮಿಯೊಬ್ಬಳನ್ನೇ ಪ್ರತ್ಯೇಕವಾಗಿ ಉಪಾಸನೆ ಮಾಡುವುದು [೧]ಶ್ರೇಯಸ್ಕರವಲ್ಲ ಎಂಬ ಪ್ರಮೇಯವನ್ನು ಸಹ ಇದು ಧ್ವನಿಸುತ್ತದೆ. ಇದರಂತೆಯೇ ಶ್ರೀಸೂಕ್ತವೂ ಸಹ ಲಕ್ಷ್ಮೀನಾರಾಯಣರ ಹಿರಿಮೆಯನ್ನು ಒಟ್ಟಾಗಿಯೇ ಸ್ತುತಿಸುವ ಸೂಕ್ತವಾಗಿದೆ ಎಂಬುದನ್ನು ಇಲ್ಲಿ ಗಮನಿಸಬಹುದು. ಆಚಾರ್ಯ ಶ್ರೀಮಧ್ವರು ಈ ಸೂಕ್ತದ ಹಿರಿಮೆಯನ್ನು "**ಅಖಿಲಕಾಮದಂ ಹರಿತುಷ್ಟಿದಂ**"(ಸಕಲಕಾಮನೆಗಳನ್ನು ಈಡೇರಿಸುವಂತಹದು ಶ್ರೀಹರಿಯ ಪ್ರೀತಿಗೆ ಕಾರಣವಾಗುವಂತಹದು) ಎಂಬುದಾಗಿ ಬಣ್ಣಿಸಿದ್ದಾರೆ(ತಂತ್ರಸಾರಸಂಗ್ರಹ ೪-೫೫).

ಅಂಭೃಣೀಸೂಕ್ತವನ್ನು ಶ್ರೀರಾಘವೇಂದ್ರಸ್ವಾಮಿಗಳು ತಮ್ಮ ವ್ಯಾಖ್ಯಾನದಲ್ಲಿ ಲಕ್ಷ್ಮೀಸೂಕ್ತ ಎಂಬುದಾಗಿ ಕರೆದಿರುವರು. ಲಕ್ಷ್ಮೀ ಎಂಬುದಕ್ಕೆ ಯಾಸ್ಕನಿರುಕ್ತ (೪-೨-೧೧) ಮತ್ತು ಅದರ ವಿವೃತಿಯಲ್ಲಿ ಬಂದಿರುವಂತೆ ನಿರ್ವಚನ ಹೀಗಿದೆ :

[೨]ಲಕ್ಷ್ಮೀರ್ಲಾಭಾದ್ವಾ ಲಕ್ಷಣಾದ್ವಾ(ಲಪ್ಸ್ಯನಾದ್ವಾ),ಲಾಂಛನಾದ್ವಾ,
ಲಷತೇರ್ವಾ ಸ್ಯಾತ್, ಪ್ರೇಪ್ಸಾಕರ್ಮಣೋ ಲಗ್ಯತೇರ್ವಾ ಸ್ಯಾತ್,
ಆಶ್ಲೇಷಕರ್ಮಣೋ ಲಜ್ಜತೇರ್ವಾ ಸ್ಯಾತ್, ಶ್ಲಾಘಾಕರ್ಮಣಃ ॥

---

೧. (೧) ಅವಿಷ್ಣುಜ್ಞೈರತದ್ಭಕ್ತೈಸ್ತದುಪಾಸಾವಿವರ್ಜಿತೈಃ।
ಶಪೇದುಪಾಸಿತಾऽಪ್ಯೇಷಾ ಶ್ರೀಸ್ತಾಂ ತದ್ಧರಿತತ್ತ್ವವಿತ್ ॥
ತದ್ಭಕ್ತಸ್ತಮುಪಾಸ್ಯೈವ ಶ್ರಿಯಂ ಧ್ಯಾಯೀತ ನಿತ್ಯದಾ ॥ - ಗೀತಾತಾತ್ಪರ್ಯ (ಅ.೧೨)
(೨) ವಿಷ್ಣುನಾ ಸಹಿತಾ ಧ್ಯಾತಾ ಸಾऽಪಿ ತುಷ್ಟಿಂ ಪರಾಂ ವ್ರಜೇತ್।- ಗೀತಾತಾತ್ಪರ್ಯ (ಅ.೧೨)

೧. ವಾ ಶಬ್ದ ಏವಾರ್ಥೇ । ಲಾಭಾತ್ ಏವ ಲಕ್ಷ್ಮೀಃ । ಲಕ್ಷ್ಮೀವಂತ ಏವ ಲಭಂತೇऽಭಿಮತಮಿತಿ । ಲಭತೇರ್ಲಕ್ಷಾದೇಶೋ ಮುದ್ರಾ ಈ ಪ್ರತ್ಯಯಶ್ಚ (ಉ. ೩-೧೬೦) ಅಥವಾ ಲಕ್ಷಣಾತ್ ಲಕ್ಷ್ಮೀಃ । ಆಲಕ್ಷಿತಃ ಸರ್ವೈರೇವ ಹಿ ಲಕ್ಷ್ಮೀವಾನ್ ಭವತಿ । ಏವಂ ಲಾಂಛನಾದೇವ ಲಕ್ಷ್ಮೀಃ । ಲಾಂಛ್ಯತೇऽಙ್ಕ್ಯತೇऽಸೌ ಮನಸೀ ಸರ್ವೈಃ ಧನಾರ್ಥಿಭಿರನಯೇತಿ ಲಕ್ಷ್ಮೀಃ । ಅಥವಾ ಪ್ರೇಪ್ಸಾಕರ್ಮಣಃ ಅಭಿಲಾಷಾರ್ಥಸ್ಯ ಲಖತೇಃ (ಭ್ವಾ.ಉ.) ಲಕ್ಷ್ಮೀಃ ಸ್ಯಾತ್ । ಸರ್ವ ಏವ ಹಿ ತಾಮಭಿಲಷಂತೀತಿ ಕರ್ಮಣಿ ಪ್ರತ್ಯಯಃ । ಧಾತೋಃ ಷಸ್ಯ ಕುಟಾಗಮೋऽತ್ರ । ಅಥವಾ ಆಶ್ಲೇಷಕರ್ಮಣಃ ಆಲಿಂಗನಾರ್ಥಸ್ಯ ಲಗ್ಯತೇಃ - "ಲಗೇ ಸಂಗೇ" (ಭ್ವಾ.ಪ.) ಇತಿ ಧಾತೋಃ ಸ್ಯಾತ್ । ಕರ್ತರಿ ಪ್ರತ್ಯಯಃ । ಆಶ್ಲಿಷ್ಯ ಏವ ಹಿ ಸಾ ವರ್ತತೇ ಪುರುಷಮ್ । ಅತ್ರ ಶ್ಯನಾ ನಿರ್ದೇಶ ಆರ್ಷಃ । ಆಕೃತಿಗಣತ್ವಂ ವಾ ದಿವಾದೇರ್ಗಮಯತಿ । ಅತ ಏವ ಕ್ಷೀಯತೇ ಮೃಗ್ಯತೀತ್ಯಾದಿಸಿದ್ಧಿರಿತ್ಯುಕ್ತಮ್ (ಸಿ.ಕೌ.) । ಅಥವಾ ಲಜ್ಜತೇಃ (ತು.ಆ.) ಅಶ್ಲಾಘಾಕರ್ಮಣಃ। ಅನಾದರಾರ್ಥಸ್ಯ ಸ್ಯಾತ್ । ಏ ಹಿ ಲಕ್ಷ್ಮೀವಂತೋ ಮಾನ್ಯಸ್ವಭಾವಾ ಭವಂತಿ ತೇ ಸ್ವಯಮಾತ್ಮಾನಂ ನ ಶ್ಲಾಘಂತೇ । ತಥಾಚಾತ್ರ ಕರಣೇ ಪ್ರತ್ಯಯಃ । ಲಜ್ಜಾಂತ ಏವ ಹಿ ತೇऽರ್ಥಿಭಿರಭಿಮುಖಂ ವರ್ಣ್ಯಮಾನಾ ಇತಿ । - ನಿರುಕ್ತವಿವೃತಿ

– ಇದರಂತೆ 'ಲಕ್ಷ್ಮೀ' ಶಬ್ದಕ್ಕೆ ಹೊಂದಲ್ಪಡುವವಳು, ಸಮಸ್ತಲಕ್ಷಣೋಪೇತಳು, ಸರ್ವಾಪೇಕ್ಷಿತಳು, ಯೋಗ್ಯತೆಯನ್ನು ಸೂಚಿಸುವವಳು, ಲೋಕಗಳನ್ನು ಬೆಳಗುವವಳು, ಸದಾ(ಶ್ರೀಹರಿಯ) ಜೊತೆಯಿರುವವಳು, ಭಗವಂತನ ಮುಂದೆ ನಾಚುವವಳು ಎಂಬರ್ಥ ಸೂಚಿತವಾಗುತ್ತದೆ. ಇವುಗಳ ಪರ್ಯಾಲೋಚನೆಯಿಂದ ಲಕ್ಷ್ಮೀ ಶಬ್ದದಿಂದ ವಾಚ್ಯಳಾದ ಮಹಾಲಕ್ಷ್ಮಿಯೇ ಅಂಭೃಣೀಸೂಕ್ತದಲ್ಲಿ ಪ್ರಸ್ತಾಪಿತಳಾದ ಮಹಾಲಕ್ಷ್ಮಿ ಎಂದು ಸಿದ್ಧವಾಗುವುದು.

ಧಾತುಪಾಠದಂತೆ ಲಕ್ಷ್ಮೀ ಎಂಬ ಪದದ ಮೂಲಧಾತುವಾದ ಲಕ್ಷ ಎಂಬುದರ ಅರ್ಥ ಹೀಗಿದೆ : ಲಕ್ಷ ದರ್ಶನಾಂಕನಯೋಃ, ಲಕ್ಷ ಆಲೋಚನೇ. ಲಕ್ಷ ದರ್ಶನಾಂಕ-ನಯೋಃ ಎಂಬ ಧಾತುಪಾಠದಂತೆ ಸಕಲಪದಾರ್ಥಗಳನ್ನೂ ಸಹ ಸಾಕ್ಷಾತ್ತಾಗಿ ಕಾಣುವವಳು ಎಂದು ಅರ್ಥವಾಗುತ್ತದೆ. ಇದರಿಂದ ಮಹಾಲಕ್ಷ್ಮಿಯು ಸರ್ವಜ್ಞಳು ಎಂಬ ಅರ್ಥ ನಿಷ್ಪನ್ನವಾಗುತ್ತದೆ. ಅದರಂತೆ ಎಲ್ಲ ಸಾತ್ವಿಕರಿಗೂ ಸಹ ವಿಷ್ಣುದೀಕ್ಷೆಯ ಅಂಕನವನ್ನು ಮಾಡಿಸುವವಳು – ಎಂದರೆ ತಾನೇ ನೇರವಾಗಿ ಮೋಕ್ಷ ನೀಡದೆ ಮಹಾವಿಷ್ಣುವಿನ ಮೂಲಕವೇ ಮೋಕ್ಷ ನೀಡಿಸುವವಳು ಎಂದಾಗುವುದು. ಅದರಂತೆ ಲಕ್ಷ ಆಲೋಚನೇ ಎಂಬ ಧಾತುಪಾಠಕ್ಕೂ [೧]ಆಲೋಚನ ಮಾತ್ರದಿಂದಲೇ ಶ್ರೀಹರಿಯ ಮಹಾತ್ಮ್ಯವನ್ನು ವೇದಾದಿ ಸಕಲ ಆಕರಗಳಿಗಿಂತ ಮಿಗಿಲಾಗಿ ಕಾಣುವವಳು ಎಂಬ ಅರ್ಥ ನಿಷ್ಪನ್ನವಾಗುವುದು. ಅದರಂತೆ ಯಾವುದೇ [೨]ಆಲೋಚನೆಯೂ ಇಲ್ಲದೆ ಶ್ರೀಹರಿಯ ಹೊರತಾದ ಸಕಲಜಗತ್ತನ್ನೂ ಸಾಕ್ಷಾತ್ತಾಗಿ ಕಾಣುವವಳು ಎಂಬ ಅರ್ಥವೂ ಸಹ. ಅಶ್ಲೇಷಕರ್ಮಣಃ ಎಂಬ ನಿರ್ವಚನದಿಂದ ಮಹಾಲಕ್ಷ್ಮಿಯು ಶ್ರೀಹರಿಯೊಂದಿಗೆ ನಿತ್ಯಾವಿಯೋಗಿನೀ (ಎಂದೂ ಅಗಲಿರದವಳು) ಎಂಬ ವಿಶೇಷ ಅರ್ಥ ಲಭಿಸುತ್ತದೆ. ಇದರಿಂದ ಶ್ರೀರಾಮನಿಗೆ ಸೀತಾವಿಯೋಗ, ಶ್ರೀರಾಮ ಮಾಡಿದ ಸೀತಾಪರಿತ್ಯಾಗ ಮೊದಲಾದವುಗಳು ಕೇವಲ ಅಸುರಮೋಹಕ ಎಂಬ ವಿಶೇಷಾಂಶ ಸ್ಫುಟಪಡುವುದು.

ಆಚಾರ್ಯ [೩]ಮಧ್ವರು ಅಂಭೃಣೀಸೂಕ್ತದ ಕೆಲವು ಋಕ್ಕುಗಳನ್ನು ತಮ್ಮ ಗ್ರಂಥಗಳಲ್ಲಿ ಹತ್ತಾರು ಸಲ ಉದಾಹರಿಸಿದ್ದಾರೆ ; ಅರ್ಥವನ್ನು ಸಹ ಸೂಚಿಸಿದ್ದಾರೆ.

---

೧. ಜಗದುದರನತಿ ವಿಮಲಗುಣರೂಪಗಳನಾಲೋಚನದಿ ಭಾರತ
ನಿಗಮತತಿಗಳತಿಕ್ರಮಿಸಿ ಕ್ರಿಯಾವಿಶೇಷಗಳ ।
ಬಗೆಬಗೆಯ ನೂತನವ ಕಾಣುತ ಮಿಗೆ ಹರುಷದಿಂ
ಪೊಗಳಿ ಹಿಗ್ಗುವ ತ್ರಿಗುಣಮಾನಿ ಮಹಾಲಕುಮಿ ಸಂತೈಸಲನುದಿನವು॥

– ಹರಿಕಥಾಮೃತಸಾರ (೧.೨)

೨. ಈಶ್ವರಾದನ್ಯತ್ರ ಅನಾಲೋಚನೆ ಸರ್ವವಿಷಯಂ ಲಕ್ಷ್ಮೀಜ್ಞಾನಮ್ ।

– ಶ್ರೀಜಯತೀರ್ಥಶ್ರೀಚರಣರು (ಪ್ರಮಾಣಪದ್ಧತಿ)

೩. ಈ ಸೂಕ್ತಕ್ಕೆ ಶಂಕರಾಚಾರ್ಯರು ಮತ್ತು ರಾಮಾನುಜಾಚಾರ್ಯರು ವ್ಯಾಖ್ಯಾನವನ್ನು ಬರೆದಿಲ್ಲ.

ಅವರ ದ್ವಾದಶಸ್ತೋತ್ರದ ''ವಿಶ್ವಸ್ಥಿತಿಪ್ರಳಯಸರ್ಗ...'' ಎಂದು ಆರಂಭವಾಗುವ ಏಳನೆಯ ಅಧ್ಯಾಯವು 'ಅಂಭೃಣೀಸೂಕ್ತ'ದ ಮಹಾತಾತ್ಪರ್ಯವನ್ನು ಸೂಚಿಸುವ ಒಂದು ಸುಂದರ ಕೃತಿಯಾಗಿದೆ ; ಶ್ರೀಸ್ತುತಿ ಎಂಬ ಹೆಸರಿನಿಂದಲೇ ಆ ಅಧ್ಯಾಯವು ಪ್ರಸಿದ್ಧವಾಗಿದೆ. ಅವರ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ ಮೊದಲಾದ ಕೃತಿಗಳಿಗೆ ಶ್ರೀಪದ್ಮನಾಭತೀರ್ಥರು, ಶ್ರೀಜಯತೀರ್ಥರು, ಶ್ರೀತ್ರಿವಿಕ್ರಮಪಂಡಿತಾಚಾರ್ಯರು, ಶ್ರೀನಾರಾಯಣಪಂಡಿತಾಚಾರ್ಯರು ಮೊದಲಾದವರು ರಚಿಸಿರುವ ಟೀಕಾಗ್ರಂಥಗಳಲ್ಲಿ ಈ ಸೂಕ್ತದ ಕೆಲವು ಋಕ್ಕುಗಳ ಅರ್ಥವು ವಿವರವಾಗಿ ಬಂದಿವೆ. ಶ್ರೀಜಯತೀರ್ಥರ ಟೀಕಾಗ್ರಂಥಗಳಿಗೆ ಶ್ರೀವ್ಯಾಸರಾಜರು, ಶ್ರೀರಾಘವೇಂದ್ರರು ಮೊದಲಾದವರು ಬರೆದಿರುವ ಟಿಪ್ಪಣಿಗಳಲ್ಲೂ ಈ ಸೂಕ್ತದ ಬಗ್ಗೆ ಸಾಕಷ್ಟು ವಿವರಗಳು ಬಂದಿವರ. ಇವುಗಳಲ್ಲಿ ಕೆಲವನ್ನು ಪ್ರಕೃತ ಸಂಪಾದನೆಯಲಿ ಅಡಿಟಿಪ್ಪಣಿಗಳರೂಪದಲ್ಲಿ ಸಂಗ್ರಹಿಸಿಕೊಡಲಾಗಿದೆ.

ವೈಷ್ಣವಪರಂಪರೆಯಲ್ಲಿ ಅಂಭೃಣೀಸೂಕ್ತಕ್ಕೆ ಸಮಗ್ರವಾಗಿ ಉಪಲಬ್ಧವಿರುವ ಅತ್ಯಂತ ಪ್ರಾಚೀನವೂ ವಿಸ್ತಾರವೂ ಆಗಿರುವ ವ್ಯಾಖ್ಯಾನವೆಂದರೆ, ಶ್ರೀವಾದಿರಾಜರು ಬರೆದಿರುವ ಪ್ರಕೃತ ವ್ಯಾಖ್ಯಾನವೇ ಆಗಿದೆ. ಇದು ಅವರ ಪ್ರತ್ಯೇಕ ಕೃತಿಯೇನೂ ಅಲ್ಲ ; ಅವರ '[೧]**ಉಪನ್ಯಾಸರತ್ನಮಾಲಾ**' ಎಂಬ ಕೃತಿಯ ಪ್ರಥಮೋಪನ್ಯಾಸದಲ್ಲಿ ಈ ಸೂಕ್ತಾರ್ಥವು ಪ್ರಾಸಂಗಿಕವಾಗಿ ಬಂದಿದೆ. ಇದನ್ನು ಹೆಚ್ಚು ಜನ ಗಮನಿಸಿದಂತೆ ತೋರುವುದಿಲ್ಲ. ಶ್ರೀರಾಘವೇಂದ್ರರು ಸಹ ಈ ಸೂಕ್ತಕ್ಕೆ [೨]ವ್ಯಾಖ್ಯಾನ ಬರೆದಿದ್ದು ಅದು ನನ್ನ ಸಂಗ್ರಹದಲ್ಲಿ ಉಪಲಬ್ಧವಿದೆ. ಶ್ರೀಧೀರೇಂದ್ರತೀರ್ಥರು, ಬಿದರಹಳ್ಳಿ ಶ್ರೀವೆಂಕಟಪತ್ಯಾಚಾರ್ಯರು ಮತ್ತು ಶ್ರೀಭಗವಂತರಾಯರು ಈ ಸೂಕ್ತಕ್ಕೆ ಬರೆದಿರುವ ವ್ಯಾಖ್ಯಾನಗಳು ಉಪಲಬ್ಧವಿದೆ. ಇವುಗಳಲ್ಲಿ ಧೀರೇಂದ್ರರ ವ್ಯಾಖ್ಯಾನವು ಒಮ್ಮೆ ಪ್ರಕಟವಾಗಿದೆ. ಬಿದರಹಳ್ಳಿಯವರ ಮತ್ತು ಭಗವಂತರಾಯರ ವ್ಯಾಖ್ಯಾನಗಳು ನನ್ನ ಸಂಗ್ರಹದಲ್ಲಿ ಉಪಲಬ್ಧವಿದೆ.

ಅಂಭೃಣೀಸೂಕ್ತಕ್ಕೆ ಸಾಯಣಭಾಷ್ಯವು ಸಹ ಇದೆ. ಪರತತ್ತ್ವವಾದ ನಾರಾಯಣನ ಹಿರಿಮೆಯನ್ನು ಮುಕ್ತಕಂಠವಾಗಿ ಘೋಷಿಸುವ ಇಂತಹ ಸೂಕ್ತದಲ್ಲೂ ಅದ್ವೈತಮತದ ಬ್ರಹ್ಮಾತ್ಮೈಕ್ಯ, ಜಗನ್ಮಿಥ್ಯಾತ್ವಗಳನ್ನು ಕಾಣಲು ಸಾಯಣರು ಪ್ರಯತ್ನಿಸಿರುವುದು ಅತ್ಯಂತ ಆಶ್ಚರ್ಯಕರವೂ,ಅಪ್ರಾಮಾಣಿಕವೂ ಆಗಿದೆ. ಶ್ರೀರಾಘವೇಂದ್ರಸ್ವಾಮಿಗಳ ವ್ಯಾಖ್ಯಾನದಲ್ಲಿ ಸಾಯಣಭಾಷ್ಯವನ್ನು ವಿವರವಾಗಿ ಖಂಡಿಸಲಾಗಿದೆ. ಸಾಯಣರು 'ಯಂ ಕಾಮಯೇ' ಮತ್ತು 'ಅಹಂ ರುದ್ರಾಯ' ಎಂಬಲ್ಲಿ ಮಾಡಿರುವ ವ್ಯಾಖ್ಯಾನದಂತೆಯೂ, ಲಕ್ಷ್ಮೀದೇವಿಗೆ ಬ್ರಹ್ಮರುದ್ರಾದ್ಯುತ್ತಮತ್ವವು ಸಿದ್ಧಿಸುತ್ತದೆ ಎಂಬುದು ಮಾತ್ರ

೧. ಪ್ರಕಟಿತ : ಶ್ರೀವಾದಿರಾಜೀಯ ಗ್ರಂಥಪ್ರಕಾಶ ಸಮಿತಿ, ರಜತಪೀಠಪುರ.

೨. ಅದನ್ನು ನನ್ನ ಕನ್ನಡ ಅನುವಾದದೊಂದಿಗೆ ನಮ್ಮ ಪ್ರತಿಷ್ಠಾನದಿಂದ ಪ್ರಕಾಶನಗೊಂಡಿದೆ (೨೦೧೧).

ಗಮನಾರ್ಹವಾದ ಅಂಶ. ಅವರ ವ್ಯಾಖ್ಯಾನದಲ್ಲಿನ ಕೆಲವು ಅಂಶಗಳನ್ನು ಸಹ ಇಲ್ಲಿ ಸಂಗ್ರಹಿಸಲಾಗಿದೆ. ವೇದಗಳು ಮತ್ತು ವೈದಿಕ ಗ್ರಂಥಗಳಲ್ಲಿನ ಪ್ರತಿವರ್ಣವೂ, ಪ್ರತಿಸ್ವರವೂ ಅರ್ಥಗೌರವದಿಂದ [1]ಕೂಡಿದೆ ಎಂದು ಸ್ಪಷ್ಟ ಪ್ರಮಾಣಗಳಿರುವಾಗ ಈ ಸೂಕ್ತದಲ್ಲಿನ 'ಹಂತವಾ ಉ' ಎಂಬಲ್ಲಿನ 'ಉ' ಶಬ್ದವನ್ನು ''ಉ' ಶಬ್ದಃ ಪೂರಕಃ' ಎಂದು ಮಾತ್ರವೇ ಬರೆಯುವ ಸಾಯಣರ ವ್ಯಾಖ್ಯಾನದ ರೀತಿ ವೈದಿಕಮರ್ಯಾದೆ ಎನ್ನಿಸದು.

೨. ಶ್ರೀವಾದಿರಾಜಸ್ವಾಮಿಗಳು (೧೪೮೦-೧೬೦೦)

ಪ್ರಕೃತ ವ್ಯಾಖ್ಯಾನಕಾರರಾದ ಶ್ರೀವಾದಿರಾಜಸ್ವಾಮಿಗಳು ದ್ವೈತವೇದಾಂತದ ಮಹಾವಿಭೂತಿಗಳಲ್ಲಿ ಒಬ್ಬರು. ಮುನಿತ್ರಯರೆಂದು ಪ್ರಸಿದ್ಧವಾಗಿರುವ ಆಚಾರ್ಯ-ಶ್ರೀಮಧ್ವರು (೧೧೯೯-೧೨೭೮), ಶ್ರೀಜಯತೀರ್ಥರು (೧೩೪೧- ೧೩೮೮) ಮತ್ತು ಶ್ರೀವ್ಯಾಸರಾಜರ (೧೪೬೦-೧೫೩೯) ಅನಂತರದ ಅಗ್ರಮಾನ್ಯ ಗ್ರಂಥಕಾರ-ರೆಂಬುದು ಇವರ ಪ್ರಶಸ್ತಿ. ಒಟ್ಟು ೧೨೦ ವರ್ಷಗಳ (೧೪೮೦-೧೬೦೦) ದೀರ್ಘಬಾಳನ್ನು ಬಾಳಿದ ವೈಷ್ಣವಯತಿಗಳು ಇವರೊಬ್ಬರೇ. ಬ್ರಹ್ಮಚರ್ಯದಿಂದ ನೇರವಾಗಿ ಪರಮಹಂಸಾಶ್ರಮ ಸ್ವೀಕರಿಸಿದ ಇವರ ಸನ್ಯಾಸಜೀವನವೇ ಸುಮಾರು ೧೧೨ ವರ್ಷಗಳಷ್ಟು ದೀರ್ಘವಾಗಿತ್ತು. ಇಷ್ಟು ದೀರ್ಘಕಾಲ ಸಂನ್ಯಾಸಾಶ್ರಮ ನಿರ್ವಹಿಸಿದ ಮತ್ತೊಬ್ಬ ಯತಿಯನ್ನು ಇತಿಹಾಸ ಕಂಡಿಲ್ಲ. ಶ್ರೀಮಧ್ವಮುನಿಗಳ ಸಹೋದರರೂ ಮಹಾತಪಸ್ವಿಗಳೂ ಆದ ಶ್ರೀವಿಷ್ಣುತೀರ್ಥರನ್ನು ಪ್ರಥಮಾಧ್ಯಕ್ಷರನ್ನಾಗಿ ಹೊಂದಿದ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಸೋದೆಮಠವು ಶ್ರೀವಾದಿರಾಜರು ಅಲಂಕರಿಸಿದ ಗುರುಪೀಠ. ಶ್ರೀವಾಗೀಶತೀರ್ಥರಿಂದ ಸನ್ಯಾಸಪಡೆದ ಇವರು ಅನಂತರ ಆ ಪೀಠವನ್ನೇರಿದರು. ಶ್ರೀವಿದ್ಯಾನಿಧಿಗಳು ಮತ್ತು ಶ್ರೀವ್ಯಾಸರಾಜರಂತಹ ಮಹಾ-ವಿದ್ವನ್ಮಣಿಗಳ ಬಳಿ ವಿವಿಧಶಾಸ್ತ್ರಗಳ ಅಧ್ಯಯನದ ಹಿನ್ನೆಲೆಯ ಇವರ ಸಾಧನೆ ಲೋಕೋತ್ತರವಾದುದು. ನೂರಾರು ಶಿಷ್ಯರಿಗೆ ಪಾಠ ಪ್ರವಚನಗಳನ್ನು ಮಾಡುತ್ತಲೇ ಅಂದಿನ ವಿಷಮರಾಜಕೀಯ ಪರಿಸ್ಥಿತಿಯಲ್ಲೂ ಸಮಗ್ರಭರತಖಂಡವನ್ನು ಸಂಚರಿಸಿ ವೈದಿಕಸಂಸ್ಕೃತಿಯ ಮಹತ್ತ್ವ, ತತ್ತ್ವಜ್ಞಾನದ ಆವಶ್ಯಕತೆ ಮತ್ತು ವೈಷ್ಣವಸಿದ್ಧಾಂತದ ಹಿರಿಮೆಗಳನ್ನು ಪ್ರಚುರಪಡಿಸಿದ ಇವರ ಕರ್ತೃತ್ವಶಕ್ತಿ ಅದ್ಭುತವಾದುದು. ತಪಶ್ಶಕ್ತಿ, ಮಂತ್ರಸಿದ್ಧಿ ಮತ್ತು ತತ್ತ್ವಜ್ಞಾನಗಳ ತ್ರಿವೇಣೀಸಂಗಮವಾಗಿದ್ದ ಇವರಿಗೆ ರಾಜ-ಮಹಾರಾಜರುಗಳು ತಲೆಬಾಗಿದರು. ಸೋದೆಯ ಅರಸಪ್ಪನಾಯಕನಂತೂ ಇವರ

---

೧. ಉಕ್ತಂ ಚ ಭಗವತಾ ವ್ಯಾಸೇನ –

ನಾನರ್ಥಕಃ ಸ್ವರೋ ವಾಽಪಿ ವರ್ಣೋ ವಾ ಕುತ್ರಚಿದ್ ಭವೇತ್ ।
ಪದಂ ವಾಕ್ಯಂ ಕುತಶ್ಚಸ್ಯಾನ್ನಾಲ್ಪಾರ್ಥಮಪಿ ಕುತ್ರಚಿದ್ ॥
ಉಚ್ಚಾರ್ಯಾದ್ಯರ್ಥಮಪಿ ವಾ ನಾಸ್ತಿ ಕಿಂಚಿತ್ ಸ್ವರಾದಿಕಮ್ ।
ಮಹಾರ್ಥಮೇವ ಸರ್ವಂ ಹಿ ವೇದೇ ವಾ ವೈದಿಕೇಽಪಿ ವಾ ॥

– ಐತರೇಯಭಾಷ್ಯ – ಆನಂದತೀರ್ಥಭಗವತ್ಪಾದ ವಿರಚಿತ (೧೧-೧)

ಆಜ್ಞಾಧಾರಕನೇ ಆಗಿದ್ದನು. **ಪ್ರಸಂಗಾಭರಣತೀರ್ಥ, ಷಡ್ದರ್ಶನಷಣ್ಮುಖ, ಸರ್ವಜ್ಞ-ಕಲ್ಪ, ಕವಿಕುಲತಿಲಕ** ಮೊದಲಾದ ಮಹತ್ತ್ವದ ಬಿರುದುಗಳಿಂದ ಅಂದಿನ ವಿದ್ವದ್ವೃಂದ ಇವರನ್ನು ಗೌರವಿಸಿದೆ. ಉಡುಪಿಯ ಶ್ರೀಕೃಷ್ಣಪೂಜೆಯ ಪರ್ಯಾಯವ್ಯವಸ್ಥೆಯನ್ನು ಎರಡು ತಿಂಗಳುಗಳಿಂದ ಎರಡು ವರ್ಷಗಳಿಗೆ ಬದಲಾಯಿಸಿದ್ದು ಇವರ ಅಗಾಧ ವರ್ಚಸ್ಸಿಗೆ ದ್ಯೋತಕವಾಗಿದೆ. ಇವರಿಗಿಂತ ಇವರ ಶಿಷ್ಯರಾದ ಶ್ರೀವೇದವೇದ್ಯ-ತೀರ್ಥರೇ ಹೆಚ್ಚು ವೃದ್ಧಾಪ್ಯವನ್ನು ಹೊಂದಿದಾಗ ಅವರ ಮೇಲಿನ ಅನುಗ್ರಹದಿಂದ ತಮ್ಮ ಒಂದು ಪರ್ಯಾಯವನ್ನೇ ಅವರಿಗಾಗಿ ಬಿಟ್ಟುಕೊಟ್ಟು, ಉಡುಪಿಯ ಪ್ರತಿ-ರೂಪದಂತೆ ಸೋದೆಯಲ್ಲಿ ಶ್ರೀತ್ರಿವಿಕ್ರಮದೇವಾಲಯ, ಧವಲಗಂಗಾಸರೋವರ ಮೊದಲಾದವುಗಳನ್ನು ನಿರ್ಮಿಸಿ, ಅಲ್ಲಿಯೇ ಆ ಬಾರಿ ಪರ್ಯಾಯವನ್ನು ಕೈಗೊಂಡ ಪ್ರಕರಣವು ಇವರ ಅಪೂರ್ವಶಿಷ್ಯವಾತ್ಸಲ್ಯ ಹಾಗೂ ಉಜ್ಜ್ವಲ ತಪಶ್ಶಕ್ತಿಗಳಿಗೆ ಉತ್ತಮ ನಿದರ್ಶನ.

ಇಂದು ಮನೆಮಾತಾಗಿರುವ ಶ್ರೀರಾಘವೇಂದ್ರಸ್ವಾಮಿಗಳಿಗಿಂತ ಮುಂಚಿತವಾಗಿಯೇ ಅಸಂಖ್ಯ ಸಾತ್ತ್ವಿಕಪವಾಡಗಳ ಮೂಲಕ ನಾಸ್ತಿಕವರ್ಗವನ್ನು ಮಣಿಸಿದ ಶ್ರೇಯಸ್ಸು ಸಹ ಇವರದೇ ಆಗಿದೆ. ಅದರಂತೆ, ಶ್ರೀರಾಘವೇಂದ್ರರಿಗಿಂತ ಮುಂಚೆಯೇ ಸಶರೀರವಾಗಿ ಬೃಂದಾವನಪ್ರವೇಶ ಮಾಡಿದ ಹಿರಿಮೆಯೂ ಇವರದಾಗಿದೆ. ಸ್ವರ್ಣಕಾರರು, ಕೋಟೇಶ್ವರದವರು ಮೊದಲಾಗಿ ಅನೇಕರಿಗೆ ವೈಷ್ಣವ ದೀಕ್ಷೆಯನ್ನು ಕೊಟ್ಟು ಉದ್ಧರಿಸಿದ ಇವರ ವಿಶಾಲದೃಷ್ಟಿ ಅನನ್ಯವಾದುದು. ಪ್ರಸಿದ್ಧ ಹರಿದಾಸರಲ್ಲೊಬ್ಬರಾದ ಶ್ರೀಕನಕದಾಸರು ಶ್ರೀವಾದಿರಾಜರ ನಿಕಟವರ್ತಿಗಳೂ, ಕೃಪಾಪಾತ್ರರೂ ಆಗಿದ್ದರೆನ್ನಲು ದಾಖಲೆಗಳಿವೆ. ಜೀವನದುದ್ದಕ್ಕೂ ಆರ್ತರ ಸಂಕಷ್ಟವನ್ನು ಸಮರ್ಥವಾಗಿ ಪರಿಹರಿಸಿದ ಇವರು ಬೃಂದಾವನವನ್ನು ಪ್ರವೇಶಿಸಿ ಶತಕಗಳೇ ಉರುಳಿದ್ದರೂ ಭಕ್ತರಿಗೆ ಇನ್ನೂ ಆಶ್ರಯದಾಯಕರಾದ ಕಲ್ಪವೃಕ್ಷ, ಕಾಮಧೇನು ಎನ್ನಿಸಿರುವರು ಎನ್ನಲು ಸೋದೆಯಲ್ಲಿ ಅವರ ಬೃಂದಾವನದ ಬಳಿ ಎಡೆಬಿಡದೆ ನೆರೆದಿರುವ ಭಕ್ತಸಮೂಹ ಸಾಕ್ಷಿಯಾಗಿದೆ. ಧರ್ಮಸ್ಥಳ, ಸೋದೆ ಮೊದಲಾದ ಅನೇಕಸ್ಥಳಗಳಲ್ಲಿ ಶಿವಲಿಂಗಗಳನ್ನು ಸಹ ಪ್ರತಿಷ್ಠಾಪಿಸಿದ ಇವರ ಮತ್ತೊಂದು ಸಾಧನೆ; ಅವರ ಈ ಕಾರ್ಯ ವೈಷ್ಣವರು ಶಿವ-ದ್ವೇಷಿಗಳೆಂಬ ಕೆಲವರ ತಪ್ಪು ತಿಳುವಳಿಕೆಯನ್ನು ಸಂಪೂರ್ಣವಾಗಿ ಹೋಗಲಾಡಿ-ಸುತ್ತದೆ. ಶ್ರೀಹಯಗ್ರೀವೋಪಾಸಕರಾಗಿದ್ದ ಶ್ರೀವಾದಿರಾಜರು ವಿದ್ಯಾಪ್ರಪಂಚಕ್ಕೆ ಸಲ್ಲಿಸಿ-ರುವ ಸೇವೆಯಂತೂ ಯಾವುದೇ ಅಳತೆಗೋಲಿನಿಂದಲೂ ಅಗ್ರಮಾನ್ಯವೇ ಆಗಿದೆ.

ಜೀವನವಿಡೀ ಇವರು ನಡೆಸಿದ ಪಾಠಪ್ರವಚನಗಳಿಗೆ ಸಾಕ್ಷಿಯಾಗಿ ಇವರ ಸೋದರರೂ, ಅನಂತರ ಭಂಡಾರಕೇರಿ ಪೀಠವನ್ನಲಂಕರಿಸಿದರೂ, ಇವರ ಯುಕ್ತಿ-ಮಲ್ಲಿಕಾ ಮತ್ತು ಪಾಷಂಡಮತಖಂಡನಗ್ರಂಥಕ್ಕೆ ಟೀಕೆ ಬರೆದವರೂ ಆದ ಶ್ರೀಸುರೋತ್ತಮತೀರ್ಥರು, ಇವರ ಉತ್ತರಾಧಿಕಾರಿಗಳಾಗಿ ಪೀಠವೇರಿದ ಶ್ರೀವೇದ-ವೇದ್ಯತೀರ್ಥರು, ಇವರ ರುಗ್ಮಿಣೀಶವಿಜಯ, ತೀರ್ಥಪ್ರಬಂಧಗಳಿಗೆ ಉತ್ಕೃಷ್ಟ

ವ್ಯಾಖ್ಯಾನಗಳನ್ನು ಬರೆದಿರುವ ನಾರಾಯಣಾಚಾರ್ಯರು, ಇವರ ಜೀವನಚರಿತ್ರೆಯನ್ನು ಹೃದಯಂಗಮವಾಗಿ ಚಿತ್ರಿಸಿರುವ ವೃತ್ತರತ್ನಸಂಗ್ರಹಕಾರ ರಘುನಾಥಾಚಾರ್ಯರು ಮೊದಲಾದ ಮಹನೀಯರನ್ನು ಇಲ್ಲಿ ಉಲ್ಲೇಖಿಸಬಹುದು.

ಅದ್ವೈತ, ಶೈವ ಮತ್ತು ಜೈನ ಎಂಬ ಮೂರು ಪಂಗಡಗಳ ವಾದಿಗಳನ್ನು ತುಂಬಾ ಸಮರ್ಥವಾಗಿ ಎದುರಿಸಿದ್ದು ಇವರ ಶಿಖರಪ್ರಾಯವಾದ ಸಾಧನೆ; ಅದರಿಂದಾಗಿ ಇವರಿಗೆ '**ವಾದಿರಾಜ**' ಎಂಬ ಹೆಸರು ತುಂಬಾ ಅನ್ವರ್ಥವಾದುದು; ಇವರ ವಾದ-ಕೌಶಲಕ್ಕೆ ಬೆರಗಾಗದ, ತಲೆಬಾಗದ ಪ್ರತಿವಾದಿಯೇ ಇರಲಿಲ್ಲ.

ಗ್ರಂಥಕಾರರಾಗಿ ಸಹ ಶ್ರೀವಾದಿರಾಜರ ಸಾಧನೆ ಅತಯ್ಂತ ಮಹತ್ತರವಾದುದು. ಸಂಖ್ಯೆ ಹಾಗೂ ಸತ್ತ್ವ ಎರಡರ ದೃಷ್ಟಿಯಿಂದಲೂ ಇವರ ಗ್ರಂಥರಚನೆ ಅಪಾರ-ವಾದುದು. ಅಷ್ಟಮಠಗಳ ಯತಿಗಳಲ್ಲಿ ಗ್ರಂಥರಚನೆಯ ದೃಷ್ಟಿಯಲ್ಲೂ ಇವರದೇ ಅಗ್ರಸ್ಥಾನ. ಮಹಾಭಾರತ ಲಕ್ಷಾಲಂಕಾರ, ತಾತ್ಪರ್ಯನಿರ್ಣಯಭಾವಪ್ರಕಾಶಿಕಾ, ಯುಕ್ತಿಮಲ್ಲಿಕಾ, ನ್ಯಾಯಸುಧಾಗುರ್ವರ್ಥದೀಪಿಕಾ, ತತ್ತ್ವಪ್ರಕಾಶಿಕಾಗುರ್ವರ್ಥ-ದೀಪಿಕಾ, ರುಗ್ಮಿಣೀಶವಿಜಯ, ಸರಸಭಾರತೀವಿಲಾಸ, ತೀರ್ಥಪ್ರಬಂಧ ಹಾಗೂ ನ್ಯಾಯರತ್ನಾವಳೀ ಇವು ಇವರ ಪ್ರಮುಖ ಸಂಸ್ಕೃತ ಕೃತಿಗಳು. ಕನ್ನಡದಲ್ಲಿ ವೈಕುಂಠವರ್ಣನೆ, ಲಕ್ಷ್ಮೀಶೋಭನಹಾಡು, ಗುಂಡಕ್ರಿಯೆ, ಸ್ವಪ್ನಪದ ಮೊದಲಾದ ಪದ್ಯಕೃತಿಗಳನ್ನು ನೂರಾರು ಕೀರ್ತನೆ, ಉಗಾಭೋಗ, ಸುಳಾದಿಗಳನ್ನು 'ಹಯವದನ' ಎಂಬ ಅಂಕಿತದಿಂದ ರಚಿಸಿ, ಹರಿದಾಸಸಾಹಿತ್ಯವನ್ನು ಸಹ ಶ್ರೀಮಂತಗೊಳಿಸಿದ್ದಾರೆ.

ಇವರ ಮಹಾಭಾರತ ಲಕ್ಷಾಲಂಕಾರವು ಸಮಗ್ರ ಮಹಾಭಾರತದ ಮೇಲೆ ರಚಿತವಾಗಿರುವ ವ್ಯಾಖ್ಯಾನಗಳಲ್ಲಿ ತುಂಬಾ ಗಮನಾರ್ಹವಾದುದು. ನ್ಯಾಯಸುಧಾ-ಗುರ್ವರ್ಥದೀಪಿಕೆಯು ಇಂದು ನ್ಯಾಯಸುಧೆಗೆ ಉಪಲಬ್ಧವಿರುವ ಟಿಪ್ಪಣಿಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದು. ಬ್ರಹ್ಮಸೂತ್ರಗಳ ಸಾರಸರ್ವಸ್ವವನ್ನು ಐದು ಸೌರಭ-ಗಳಲ್ಲಿ ಸರಸವಾದ ಯುಕ್ತಿಗಳಿಂದ ತೆರತೆರನಾಗಿ ವಿವರಿಸುವ ಇವರ 'ಯುಕ್ತಿಮಲ್ಲಿಕಾ' ಗ್ರಂಥವು ಉಪಲಬ್ಧ ಸಾಹಿತ್ಯರಾಶಿಯಲ್ಲೇ ಅತ್ಯಂತ ಬೃಹತ್ತಾದ ಶ್ಲೋಕರೂಪದ ಸ್ವತಂತ್ರ 'ವಾದಗ್ರಂಥ'. ಶಾಸ್ತ್ರನ್ಯಾಯ ಮತ್ತು ಲೋಕನ್ಯಾಯಗಳನ್ನು ಅಸಂಖ್ಯವಾಗಿ ಉಪಯೋಗಿ-ಸಿಕೊಂಡು ವೇದಾಂತ ತತ್ತ್ವಗಳನ್ನು ಜಿಜ್ಞಾಸುಗಳಿಗೆ ತುಂಬಾ ಯಶಸ್ವಿಯಾಗಿ ತಲುಪಿಸುವ ಇಂತಹ ಮತ್ತೊಂದು ಸ್ವತಂತ್ರಗ್ರಂಥ ಇಲ್ಲವೇ ಇಲ್ಲ. ಶ್ರೀಕೃಷ್ಣಚರಿತ್ರೆಯನ್ನು ವರ್ಣಿಸುವ 'ರುಗ್ಮಿಣೀಶವಿಜಯ'ವು ನವರಸಭರಿತವಾದ ಒಂದು ಸುಂದರ ಮಹಾಕಾವ್ಯ. ಭಾಷೆ, ಶೈಲಿ ಮತ್ತು ವಿಷಯಗಳ ದೃಷ್ಟಿಯಿಂದ ಇಷ್ಟು ಪರಿಪಕ್ವವಾದ ರಚನೆಗಳು ಯಾವ ಭಾಷೆಯ ಸಾಹಿತ್ಯದಲ್ಲೂ ವಿರಳವೇ ಸರಿ. ತಾವು ಸಂದರ್ಶಿಸಿದ ತೀರ್ಥಕ್ಷೇತ್ರಗಳು ಹಾಗೂ ಅವುಗಳ ದೇವತೆಗಳ ಮಹಿಮೆಯನ್ನು ಶಾಸ್ತ್ರಶುದ್ಧವಾಗಿ, ತರ್ಕಬದ್ಧವಾಗಿ ಶ್ಲೋಕರೂಪದಲ್ಲಿ ನಿರೂಪಿಸುವ ಇವರ 'ತೀರ್ಥಪ್ರಬಂಧ' ಕೃತಿಯು ಸಮಗ್ರ ಸಂಸ್ಕೃತಸಾಹಿತ್ಯದಲ್ಲೇ ವಿನೂತನ ರೀತಿಯ ರಚನೆಯಾಗಿದೆ.

ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸ್ತೋತ್ರಕೃತಿಗಳನ್ನು ಬರೆದಿರುವ ವೈಷ್ಣವಗ್ರಂಥ-ಕಾರರೆಂಬುದು ಇವರ ಮತ್ತೊಂದು ಪ್ರಶಸ್ತಿ. 'ದಶಾವತಾರಸ್ತುತಿ', 'ಕೃಷ್ಣಾಷ್ಟಕ' ಮೊದಲಾದ ಇಂದು ಉಪಲಬ್ಧವಿರುವ ನಲವತ್ತಕ್ಕೂ ಹೆಚ್ಚಿನ ಇವರ ಸ್ತೋತ್ರಕೃತಿಗಳು ಛಂದೋವೈವಿಧ್ಯ, ರಚನಾಕೌಶಲ, ಶ್ಲೇಷ, ಯಮಕ, ಅನುಪ್ರಾಸಾದಿ ಅಲಂಕಾರ ವೈಭವ, ಗೇಯತೆ, ಅರ್ಥವಿಸ್ತಾರ ಮೊದಲಾದ ಗುಣಗಳಿಂದಾಗಿ ಆ ಮಾಧ್ಯಮಕ್ಕೆ ಸಂದಿರುವ ಉತ್ಕೃಷ್ಟ ಕೊಡುಗೆಗಳಾಗಿದ್ದು, ಅವುಗಳ ಶ್ರವಣಪಠಣಗಳು ವಿನೂತನ ಪ್ರಪಂಚವನ್ನೇ ಸೃಷ್ಟಿಸಿಬಿಡುತ್ತವೆ.

ಕಾವ್ಯದ ಮಾಧುರ್ಯ ಮತ್ತು ಶಾಸ್ತ್ರದ ಅರ್ಥಗೌರವ ಈ ಎರಡೂ ವಾದಿರಾಜರ ಕೃತಿಗಳಲ್ಲಿ ಓತಪ್ರೋತವಾಗಿವೆ. ಮನಸೆಳೆಯುವ ಸರಸಸುಂದರಯುಕ್ತಿಗಳು ಮತ್ತು ಅನುಪ್ರಾಸ ಭೂಯಿಷ್ಠವಾದ ಶೈಲಿ, ಇವು ಶ್ರೀವಾದಿರಾಜರ ಕೃತಿಗಳಲ್ಲಿ ಉದ್ದಕ್ಕೂ ಗೋಚರಿಸುವ ಅಂಶಗಳು. ಸಂಸ್ಕೃತಭಾಷೆಯನ್ನು ಶಾಸ್ತ್ರ, ಕಾವ್ಯ, ಖಂಡನೆ, ಮಂಡನೆ, ಟೀಕೆ, ಟಿಪ್ಪಣಿ, ಗದ್ಯ, ಪದ್ಯ ಮೊದಲಾದ ಎಲ್ಲಾ ಮಾಧ್ಯಮಗಳಿಗೂ ಪರಿಣಾಮ-ಕಾರಿಯಾಗಿ ಅಳವಡಿಸಿಕೊಂಡಿರುವ ಗ್ರಂಥಕಾರರಲ್ಲಿ ಆಚಾರ್ಯ ಶ್ರೀಮಧ್ವರ ಅನಂತರದ ಅಗ್ರಸ್ಥಾನ ಇವರದೇ ಆಗಿದೆ. ಸಾರ್ವಕಾಲಿಕಮಹತ್ತ್ವದ ಇವರಂಥ ಗ್ರಂಥಕಾರರು ಇತಿಹಾಸದಲ್ಲಿ ಅಪೂರ್ವ. ಶಾಸ್ತ್ರವೈದುಷ್ಯ, ಸಿದ್ಧಾಂತನಿಷ್ಠೆ ಮತ್ತು ಕಾವ್ಯಪ್ರತಿಭೆಗಳೊಂದಿಗೆ ಆನಂದತೀರ್ಥಭಗವತ್ಪಾದರ ಬಗ್ಗೆ ತುಂಬಿತುಳುಕುವ ಭಕ್ತಿಭಾವ ಇವರ ಕೃತಿಗಳಲ್ಲೆಲ್ಲ ಗೋಚರಿಸುವ ಮತ್ತೊಂದು ವಿಶಿಷ್ಟಗುಣ. ಮನಸ್ಸನ್ನು ಅರಳಿಸುವ ಕಾವ್ಯಮಾಧುರ್ಯ, ವಿಚಾರಗಳನ್ನು ಕೆರಳಿಸುವ ಯುಕ್ತಿಕೌಶಲ ಇವುಗಳನ್ನು ಹಾಸುಹೊಕ್ಕಾಗಿ ಹೊಂದಿರುವ ಇವರ ಗ್ರಂಥರಚನೆಯ ಸಿದ್ಧಿ ಅಸಾಮಾನ್ಯವಾದುದು.

೩. ಶ್ರೀವಾದಿರಾಜಸ್ವಾಮಿಗಳ ಕೃತಿಗಳು

೧. ಟೀಕೆಗಳು

೧. ಮಹಾಭಾರತಲಕ್ಷಾಲಂಕಾರ[೧]
೨. ಮ.ಭಾ.ತಾ.ನಿರ್ಣಯಭಾವಪ್ರಕಾಶಿಕಾ[೨]
೩. ತಲವಕಾರೋಪನಿಷದ್ಭಾಷ್ಯಟೀಕಾ*
೪. ತೈತ್ತಿರೀಯೋಪನಿಷದ್ಭಾಷ್ಯಟೀಕಾ*
೫. ಕಾಠಕೋಪನಿಷದ್ಭಾಷ್ಯಟೀಕಾ
೬. ಆಥರ್ವಣೋಪನಿಷದ್ಭಾಷ್ಯಟೀಕಾ*
೭. ಮಾಂಡೂಕೋಪನಿದ್ಭಾಷ್ಯಟೀಕಾ*
೮. ತಂತ್ರಸಾರಟೀಕಾ*
೯. ಸನತ್ಸುಜಾತೀಯವ್ಯಾಖ್ಯಾನ[೩]
೧೦. ಪುರುಷಸೂಕ್ತವ್ಯಾಖ್ಯಾನ

---

೧. ಪ್ರಕಾಶಿತ: ಶ್ರೀಸೋದಾವಾದಿರಾಜಮಠ, ಉಡುಪಿ

೨. *ಪ್ರಕಾಶಿತ: ಶ್ರೀವಾದಿರಾಜಗ್ರಂಥಪ್ರಕಾಶನ ಸಮಿತಿ, ಉಡುಪಿ

೩. **ಪ್ರಕಾಶಿತ: ಟಿ.ಆರ್. ಕೃಷ್ಣಾಚಾರ್ಯ, ಕುಂಭಕೋಣಂ

೨. ಟಿಪ್ಪಣಿಗಳು

೧.ನ್ಯಾಯಸುಧಾಗುರ್ವರ್ಥದೀಪಿಕಾ★
೨.ತತ್ತ್ವಪ್ರಕಾಶಿಕಾಗುರ್ವರ್ಥದೀಪಿಕಾ★
೩.ಈಶಾವಾಸ್ಯೋಪನಿಷದ್ಭಾಷ್ಯಟಿಪ್ಪಣಿ★
೪.ಷಟ್ಪ್ರಶ್ನೋಪನಿಷದ್ಭಾಷ್ಯಟೀಕಾಟಿಪ್ಪಣಿ★
೫.ಗೀತಾಭಾಷ್ಯಟಿಪ್ಪಣಿ[೧]
೬. ಪ್ರಮಾಣಪದ್ಧತಿ ಟಿಪ್ಪಣಿ[೨]

೩. ಸ್ವತಂತ್ರಗ್ರಂಥಗಳು(ಶಾಸ್ತ್ರಕೃತಿಗಳು)

೧. ಯುಕ್ತಿಮಲ್ಲಿಕಾ★★(ಶ್ಲೋ. ಸಂ. ೫೩೭೯)
೨. ನ್ಯಾಯರತ್ನಾವಲೀ[೩] (೯೦೧)
೩. ಚಕ್ರಸ್ತುತಿ★ (೭೬)
೪. ಉಪನ್ಯಾಸರತ್ನಮಾಲಾ★
೫. ಹರಿಭಕ್ತಿಲತಾ (೩೯೪)
೬. ಶ್ರುತಿತತ್ತ್ವಪ್ರಕಾಶಿಕಾ[೧] (೫೦೭)
೭. ಸದಾಚಾರಸ್ಮೃತಿ★ (೬)
೮. ಸಂಕಲ್ಪಪದ್ಧತಿ★ (೬)
೯. ಏಕಾದಶೀನಿರ್ಣಯ★ (೫೫)
೧೦. ಭೂಗೋಲನಿರ್ಣಯ★(೫೫)
೧೧.ತಾರತಮ್ಯ (೮೧)
೧೨. ಚಿಂತಾಖಂಡನ★ (೧೫)
೧೩.ಪಾಷಂಡಖಂಡನವ್ಯಾಸಸ್ತೋತ್ರ (೩೦)
೧೪. ಪಾಷಂಡಮತಖಂಡನ[೪] (೧೨೯)
೧೫.ಕಲ್ಪಲತಾ★
೧೬. ವಿವರಣವ್ರಣ★
೧೭.ಶಕುನಮಾಲಾ[೫]
೧೮. ಮುಹೂರ್ತರಾಜ[೧]
೧೯.ಮಾಧ್ವವಾಗ್ವಜ್ರಾವಲಿ
೨೦. ಸಂಸ್ಕೃತ(ಬ್ರಹ್ಮ)ಸೂತ್ರಾರ್ಥ
೨೧.ನಯಸಿದ್ಧಾಂತಸಂಗ್ರಹ
೨೨. ಅಧಿಕರಣನಾಮವಲಿ★
೨೩.ಶ್ರೀಮದ್ಭಾಗವತಾನುಕ್ರಮಣಿಕಾ[೬] (೧೧೮)
೨೪. ವಾಯುಸ್ತುತಿಪುರಶ್ಚರಣವಿಧಿ[೧]
೨೫. ಪೂಜಾಕಲ್ಪ★

೪. ಸ್ವತಂತ್ರಗ್ರಂಥಗಳು(ಕಾವ್ಯಗಳು)

೧. ರುಗ್ಮಿಣೀಶವಿಜಯ[೭](೧೨೪೧)
೨. ತೀರ್ಥಪ್ರಬಂಧ (೨೧೫)

---

೧. ಅನುಪಲಬ್ಧಕೃತಿ

೨. ಇದರ ಉಲ್ಲೇಖ ಪ್ರಮಾಣಪದ್ಧತಿಯ ಜನಾರ್ದನಭಟ್ಟೀಯ ಟಿಪ್ಪಣಿಯಲ್ಲಿ ಬಂದಿದೆ. –
ಅತ್ರ ವಾದಿರಾಜತೀರ್ಥಾ ಆಶಂಕ್ಯ ಸಮಾದಧತೇ। ತಥಾ ಹಿ ....।
(ಪ್ರತ್ಯಕ್ಷಪರಿಚ್ಛೇದ ಪು. ೯೮)

೩. ಪ್ರಕಾಶಿತ : ಶ್ರೀಸೋದೆ ವಾದಿರಾಜಮಠ, ಉಡುಪಿ.

೪. ಪ್ರಕಾಶಿತ: ಚಿಕ್ಕೇರೂರು ಗೋವಿಂದಾಚಾರ್ಯರು, ಹರಪನಹಳ್ಳಿ

೫. ಹಸ್ತಪ್ರತಿ : ಶ್ರೀಜಯತೀರ್ಥಸಂಸ್ಕೃತಹಸ್ತಲಿಖಿತ ಗ್ರಂಥಾಲಯ, ವ್ಯಾಸನಕೆರೆ.

೬. ಪ್ರಕಾಶಿತ

೭. ಇದು ಶ್ರೀನಾರಾಯಣಾಚಾರ್ಯರ ಸಂಸ್ಕೃತ ವ್ಯಾಖ್ಯಾನದೊಂದಿಗೆ ತಿರುಚಾನೂರಿನ ಶ್ರೀಮನ್ಮಧ್ವ ಸಿದ್ಧಾಂತೋನ್ನಾಹಿನೀಸಭಾದಿಂದ ಪ್ರಕಾಶಿತವಾಗಿದೆ(೧೯೯೦).

೨. ಸರಸಭಾರತೀವಿಲಾಸ (೭೦೦)
೪. ಕವಿಕದಂಬಕಂಠಭೂಷಾ (೧೫)
೫. ಭಾಗವತಸಂಗ್ರಹ [೧]
೬. ಸನತ್ಸುಜಾತೀಯವ್ಯಾಖ್ಯಾ

೫. ಸ್ವತಂತ್ರಗ್ರಂಥಗಳು(ಸ್ತೋತ್ರಗಳು)

೧. ರಮೇಶಸ್ತುತಿ (೪)
೨. ವಿಷ್ಣುಸ್ತುತಿ (೯)
೩. ದಶಾವತಾರಸ್ತೋತ್ರ (೯)
೪. ದಶಾವತಾರಸ್ತುತಿ (೩೪)
೫. ಚತುರ್ವಿಂಶತಿ ಮೂರ್ತಿಸ್ತೋತ್ರ (೮)
೬. ವರಾಹಹಯವದನ ಸ್ತೋತ್ರ(೬)
೭. ವರಾಹಪಂಚಕ (೫)
೮. ನರಹರ್ಯಷ್ಟಕ (೯)
೯. ತ್ರಿವಿಕ್ರಮಸ್ತೋತ್ರ (೧೮)
೧೦. ಶ್ರೀರಾಮದಶಕ (೨೪)
೧೧. ಶ್ರೀರಾಮಪಂಚಕ (೬)
೧೨. ಶ್ರೀರಾಮಕವಚ (೧೧)
೧೩. ರೂಪ್ಯಪೀಠಕೃಷ್ಣಸ್ತುತಿ (೯)
೧೪. ಶ್ರೀಕೃಷ್ಣಸ್ತವ (೯)
೧೫. ಶ್ರೀಕೃಷ್ಣಸ್ತುತಿ (೯)
೧೬. ಅಷ್ಟಮಹಿಷೀಕೃತಕೃಷ್ಣಸ್ತುತಿ (೯)
೧೭. ಶ್ರೀಕೃಷ್ಣಸ್ತೋತ್ರ (೯)
೧೮. ಶ್ರೀಕೃಷ್ಣ ಆಪಾದಸ್ತೋತ್ರ (೧೧)
೧೯. ಹರ್ಯಷ್ಟಕ (೯)
೨೦. ಹಯಾಸ್ಯದಶಕ (೧೧)
೨೧. ಹಯವದನಾಷ್ಟಕ (೯)
೨೨. ಹಯಾಸ್ಯನುತಿಪಂಚಕ (೬)
೨೩. ಹಯಗ್ರೀವಧ್ಯಾನಪ್ರಕರಣ (೩೯)
೨೪. ಹಯಗ್ರೀವಸ್ತುತಿ (೧೮)
೨೫. ಹಯಗ್ರೀವಸಂಪದಾಸ್ತೋತ್ರ (೪)
೨೬. ಹಯಗ್ರೀವಸ್ತೋತ್ರ (೧೧)
೨೭. ಶ್ರೀಹಯಗ್ರೀವಸ್ತೋತ್ರ (೧೬)
೨೮. ಶ್ರೀವೇದವ್ಯಾಸಾಷ್ಟಕ (೯)
೨೯. ಶ್ರೀವ್ಯಾಸವರ್ಣನ (೨)
೩೦. ವೇಂಕಟೇಶಸ್ತುತಿಃ (೨)
೩೧. ವೇಂಕಟೇಶಮಂಗಲಾಷ್ಟಕ (೯)
೩೨. ಅಕ್ಷಪಂಚಕ (೬)
೩೩. ಉಕ್ತಿಪ್ರತ್ಯುಕ್ತಿಸ್ತೋತ್ರ (೩)
೩೪. ಧೀಶುದ್ಧಿಸ್ತೋತ್ರ (೧೨)
೩೫. ಪ್ರಾರ್ಥನಾದಶಕ (೧೨)
೩೬. ದೇವತಾಹ್ವಾನಪ್ರಕಾರ(ಗದ್ಯ)★
೩೭. ಶ್ಲೋಕತ್ರಯ(ನೈವೇದ್ಯವಿಧಿ)(೪)
೩೮. ಪರಮಸ್ತುತಿ (೯)
೩೯. ಋಣಮೋಚನಸ್ತೋತ್ರ (೯)
೪೦. ಸ್ವಪ್ನಪದ್ಯ (೧)
೪೧. ಸಪ್ತರಾತ್ರೋತ್ಸವಪ್ರಕಾರ (೨೩)
೪೨. ಅಭಯಸಂಸ್ತವ (೧೩)
೪೩. ಶ್ರೀಶ್ರೀಶಗುಣದರ್ಪಣ (೧೯)
೪೪. ಲಕ್ಷ್ಮ್ಯಾರ್ಯಾವೃತ್ತ (೧೩)

---

೧. ಇದರ ಹಸ್ತಪ್ರತಿಯು ಉಡುಪಿ ಶ್ರೀಸೋದೆಮಠದ ಗ್ರಂಥಾಗಾರದಲ್ಲಿದೆ :

ಶ್ರೀಭಾಗವತದುಗ್ಧಾಬ್ಧೇರುದ್ಧೃತಂ ಸಂಗ್ರಹಾಮೃತಮ್ ।
ವಾದಿರಾಜಾಖ್ಯಯತಿನಾ ಮಾಧ್ವಭೂದೇವತೃಪ್ತಯೇ ॥

– ಎಂಬುದು ಈ ಗ್ರಂಥದ ಕೊನೆಯ ಶ್ಲೋಕ.

೨. ಶ್ರೀವಾದಿರಾಜರಿಂದ ರಚಿತವಾದ ಈ ಎರಡು ಕೃತಿಗಳು ನನ್ನ ಸಂಗ್ರಹ (ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ ವ್ಯಾಸನಕೆರೆ)ದಲ್ಲಿ ಇತ್ತೀಚೆಗೆ ದೊರೆತಿವೆ.

★ ಇವೆಲ್ಲವೂ ನಮ್ಮ ಪ್ರಕಾಶನದ 'ಪೂಜಾಕಲ್ಪ' ಎಂಬ ಕೃತಿಯಲ್ಲೂ, 'ಸ್ತೋತ್ರಮಾಲಿಕಾ ಭಾಗ-೨' ಕೃತಿಯಲ್ಲೂ ಪ್ರಕಾಶಿತವಾಗಿವೆ.

೪೫. ದುರ್ಗಾಸ್ತವ (೧೫)
೪೭. ಮಧ್ವಾಷ್ಟಕ (೯)
೪೯. ಮಧ್ವಮುನಿಪ್ರತಾಪಾಷ್ಟಕ (೯)
೫೧. ಶ್ರೀಪಾದರಾಜಷಟ್ಕ (೯)
೫೩. ಕುರುಸ್ತುತಿ (೧೫)
೫೫. ಶ್ರೀಕೃಷ್ಣರಾಮಾವತಾರಚರಿತರತ್ನಸಂಗ್ರಹ
೫೭. ಶ್ರೀ ವೇಂಕಟೇಶ ಮಂಗಳಾಷ್ಟಕ-೨★
೪೬. ಅವತಾರತ್ರಯಸ್ತೋತ್ರ (೩)
೪೮. ವಾಯುಸ್ತುತಿ (೧೫)
೫೦. ನವಗ್ರಹಸ್ತೋತ್ರ (೫)
೫೨. ಸಹಸ್ರಾರಸ್ತುತಿ(ಚಕ್ರಸ್ತುತಿ)(೧೩)
೫೪. ಹರಿಭಕ್ತಾಷ್ಟಕ (೯)
೫೬. ಶ್ರೀವೇಂಕಟೇಶಸ್ತೋತ್ರ
೫೮. ಶ್ರೀಪೂರ್ಣಪ್ರಜ್ಞಗ್ರಂಥಮಾಲಿಕಾ★

೬. ಸ್ವತಂತ್ರಕೃತಿಗಳು(ಕನ್ನಡ ಕೃತಿಗಳು)

೧. ವೈಕುಂಠವರ್ಣನೆ
೨. ಲಕ್ಷ್ಮೀಶೋಭನ
೩. ಸ್ವಪ್ನಪದ
೪. ಗುಂಡಕ್ರಿಯೆ
೫. ಭ್ರಮರಗೀತೆ
೬. ನಮಸ್ಕಾರಸ್ತೋತ್ರ
೭. ಕೇಶವನಾಮ
೮. ನೈವೇದ್ಯಪ್ರಕರಣ
೯. ಅವತಾರತ್ರಯಸುವಾಲಿ
೧೦. ನೂರಾರು ದೇವರನಾಮಗಳು
೧೧. ಉಗಾಭೋಗಗಳು
೧೨. ಸುಳಾದಿಗಳು
೧೩. ಶ್ರೀಕೃಷ್ಣಬಾಲಲೀಲೆ
೧೪. ರಾಗಮಾಲಿಕೆ

ಯುಕ್ತಿವೈಭವದ ದೃಷ್ಟಿಯಿಂದ ಅವರ ಸಕಲಕೃತಿಗಳೂ ಯುಕ್ತಿಮಲ್ಲಿಕೆಗಳಾಗಿವೆ. ಶೈಲಿಯ ರಮ್ಯತೆಯಿಂದ 'ಸರಸಭಾರತೀವಿಲಾಸ'ಗಳಾಗಿವೆ; ಕಾವ್ಯದ ದೃಷ್ಟಿಯಿಂದ ರುಗ್ಮಿಣೀಶವಿಜಯವಾಗಿವೆ; ವ್ಯಾಖ್ಯಾನಕೌಶಲದ ದೃಷ್ಟಿಯಿಂದ 'ಗುರ್ವರ್ಥದೀಪಿಕೆ'ಗಳಾಗಿವೆ; ಮೂಲಗ್ರಂಥಗಳ 'ಭಾವಪ್ರಕಾಶಿಕೆ'ಗಳಾಗಿವೆ. ಒಟ್ಟಾಗಿ ಮಹಾಭಾರತಾದಿ ಮೂಲಗ್ರಂಥಗಳಿಗೆ ಅಪೂರ್ವ 'ಅಲಂಕಾರ' ಪೂಜೆಯಾಗಿವೆ; ಪರಮತವಿಮರ್ಶೆಯ ದೃಷ್ಟಿಯಿಂದ 'ಪಾಷಂಡಮತಖಂಡನ'ವಾಗಿವೆ; ಕವಿಕದಂಬಕ್ಕೆ 'ಕಂಠಭೂಷ'ವಾಗಿವೆ; ಹಯಗ್ರೀವ, ಕೃಷ್ಣಾದಿಭಗವದ್ರೂಪಗಳ ದಿವ್ಯಸ್ತೋತ್ರವಾಗಿವೆ; 'ಲಕ್ಷ್ಮೀಸ್ತೋತ್ರ'ಗಳಾಗಿ ಸಂಪತ್ಕರವೂ 'ಮಧ್ವಸ್ತುತಿ'ಗಳಾಗಿ ತತ್ತ್ವಜ್ಞಾನಜನಕವೂ ಆಗಿವೆ. ಅವರ ಚಿಂತನೆ ತತ್ತ್ವಶಾಸ್ತ್ರವಾದರೆ, ರಚನೆ ಮಹಾಕಾವ್ಯವಾಗಿದೆ.

ಶ್ರೀವಾದಿರಾಜರ ಶೈಲಿಯ ಅಪೂರ್ವತೆ

ಶ್ರೀವಾದಿರಾಜರದು ಸಂಸ್ಕೃತ ಸಾಹಿತ್ಯದಲ್ಲಿಯೇ ಅತ್ಯಂತ ಅಪೂರ್ವವೆನ್ನಿಸುವ ರಮ್ಯಶೈಲಿ. ಅವರ ರಚನೆ ಗದ್ಯವಿರಲಿ, ಪದ್ಯವಿರಲಿ ಅನುಪ್ರಾಸಾದಿ ಅಲಂಕಾರಗಳಿಂದ ತುಂಬಿ ಮನಸ್ಸಿಗೆ ಮುದನೀಡುತ್ತವೆ. ತತ್ತ್ವಶಾಸ್ತ್ರದ ಗಹನವಿಚಾರಗಳನ್ನು ರಮಣೀಯವಾದ ಶಬ್ದಜಾಲದಲ್ಲಿ ಅಪೂರ್ವಯುಕ್ತಿಗಳೊಂದಿಗೆ ನಿರೂಪಿಸುವ ಅವರ ಶೈಲಿ ದಾರ್ಶನಿಕಸಾಹಿತ್ಯದಲ್ಲೇ ತೀರ ವಿನೂತನ. ಅದು ಪಾಮರರಂಜಕ,

ಪಂಡಿತಬೋಧಕ; ಎಂತಹ ಅರಸಿಕನ ಮನಸ್ಸಿಗೂ ದಿವ್ಯರಸಾನುಭೂತಿಯನ್ನು ನೀಡುವ ಮಾಂತ್ರಿಕಶಕ್ತಿ ಅದರದು :

ವಾದಿರಾಜಮುಖಾಂಭೋಜನಿಃಸೃತಾ ವಾಕ್‌ಸರಸ್ವತೀ ।
ಅಶ್ವಗ್ರೀವಯಶೋಗಂಗಾಸಂಗಾऽಸ್ಮಾನ್ ಪಾವಯತ್ವಲಮ್ ॥
ಚಿತ್ರಾಲಂಕಾರರಮ್ಯಾ ಮೃದುಪದವಿಲಸನ್ನರ್ಮಗಂಭೀರಭಾವಾ
ಸತ್ಸರ್ಗಾಶ್ಚರ್ಯಬಂಧಾ ನವರಸಭರಿತಾ ಸ್ತುತ್ಯಸಂಸ್ಥಾನಯುಕ್ತಾ ।
ಕಾವ್ಯಶ್ರೀರಾವಿರಾಸೀತ್ ಯದಮಲಹೃದಯಾಚ್ಛ್ರೀಪತೇರ್ಯತ್ರ ವಾಸಃ
ಸೋऽವ್ಯಾಚ್ಛ್ರೀವಾದಿರಾಜಾಮೃತಮಯಜಲಧಿರ್ಯುಕ್ತಿರತ್ನಾಕರೋ ನಃ ॥

- ಶ್ರೀನಾರಾಯಣಾಚಾರ್ಯರು (ರುಗ್ಮಿಣೀಶವಿಜಯ ವ್ಯಾಖ್ಯಾನ)

ಸವಿನೋದಂ ಸಾಟ್ಟಹಾಸಂ ಸಸ್ಮಿತಂ ಸುಸ್ವರಾನ್ವಿತಮ್ ।
ಸರಹಸ್ಯಂ ಸಪ್ರಮಾಣಂ ವಾದಿರಾಜವಚೋऽಮೃತಮ್ ॥
ಸಂಪ್ರದಾಯಯುತಂ ತತ್ತ್ವನಿರ್ಣಯಾಢ್ಯಂ ವಿಸಂಶಯಮ್ ।
ಅವಾರ್ಯಂ ಪಂಡಿತಾಗ್ರೈಶ್ಚ ಪ್ರತಿಚೋದ್ಯನಿವಾರಕಮ್ ॥
ಸಸುಂದರಶಿರಃಕಂಪಂ ಪ್ರಹರ್ಷಿತಸಭಾಜನಮ್ ।
ವಿಕಾಸಿತಶ್ರೋತ್ರಮುಖಂ ವಿಕಸ್ವರವಿಲೋಚನಮ್ ॥
ಹೃಷ್ಯತ್ತನೂರುಹಂ ಗಾತ್ರೇ ಸ್ವರ್ಪಿತಶ್ರೋತ್ರಮಾನಸಮ್ ।
ಸುಖಬೋಧಕರಂ ಶ್ರೋತುರ್ಗ್ರಾಹ್ಯಂ ಸದ್ಭಿಃ ಪುಮರ್ಥದಮ್ ॥
ವಾಗೀಶ್ವರೇಶಕಾರುಣ್ಯವಾರ್ಧಿಜಾತಂ ಸುಕೋಮಲಮ್ ।
ನಿರ್ದುಷ್ಟಂ ರಸವತ್ಸ್ಪಷ್ಟಂ ನಾನಂದಯತಿ ಕಂ ಜನಮ್ ॥

- ಶ್ರೀರಘುನಾಥಾಚಾರ್ಯರು(ವೃತ್ತರತ್ನಸಂಗ್ರಹ)

ಸರಸಭಾರತೀವಿಲಾಸಕ್ಕೆ ಅವರು ಮಾಡಿರುವ ಬಣ್ಣನೆ ಅವರ ಎಲ್ಲ ಗ್ರಂಥಗಳಿಗೂ ಒಟ್ಟಾಗಿ ಅನ್ವಯಿಸುವ ಅಪೂರ್ವ ಹಿರಿಮೆ :

ಚಾರ್ವಪೂರ್ವಪದಶ್ರೇಣೀಂ ದುರ್ವಾಗ್ಗರ್ವಾಪಹಾರಿಣೀಮ್ ।
ಸರ್ವೇಷ್ಟಕಾರಿಣೀಂ ಉರ್ವೀಂ ಕುರ್ವೇ ಸರಸಭಾರತೀಮ್ ॥ (೧-೪)

4. ಅಂಭೃಣೀಸೂಕ್ತ ವ್ಯಾಖ್ಯಾನ

ಶ್ರೀವಾದಿರಾಜರ ಇತರ ಕೃತಿಗಳಂತೆ ಅವರ ಈ ಅಂಭೃಣೀಸೂಕ್ತ ವ್ಯಾಖ್ಯಾನವು ಸಹ ತಂಬಾ ಶ್ರೇಷ್ಠಮಟ್ಟದ ರಚನೆಯಾಗಿದೆ. ಆರಂಭದಲ್ಲಿ ಅಂಭೃಣೀಸೂಕ್ತವು ಲಕ್ಷ್ಮೀ-ಸೂಕ್ತವೆಂಬುದಾಗಿ ಸಮರ್ಥಿಸಿರುವ ರೀತಿ ತುಂಬಾ ಸಮರ್ಥವಾಗಿದೆ. ರುದ್ರೇಭಿಃ, ದಧಾಮಿ, ಅವ್ಯೇ, ರಾಷ್ಟ್ರೀ, ಭೂರಿಸ್ಥಾತ್ರಾಂ, ಭೂರ್ಯಾವೇಶಯಂತೀಂ, ಉಪ-ಕ್ಷಿಯಂತಿ, ಸುಮೇಧಾಂ, ಸಮದಂ, ಮೂರ್ಧನ್, ಅಪ್ಸ್ವಂತಃ ಸಮುದ್ರೇ, ವಿತಿಷ್ಠೇ, ಉಪಸ್ಪೃಶಾಮಿ, ವಾತ ಇವ ಪ್ರವಾಮಿ ಮೊದಲಾದವುಗಳಿಗೆ ಅವರು ಬರೆದಿರುವ ಅರ್ಥಗಳು ಅತ್ಯಂತ ರಮಣೀಯವಾಗಿವೆ. 'ಮಯಾ ಸೋऽನ್ನಮತ್ತಿ' ಎಂಬ

ಋಕ್ಕಿಗೂ 'ತತೋ ವಿತಿಷ್ಠೇ ಭುವನಾನಿ ವಿಶ್ವಾ' ಮತ್ತು 'ಅಹಮೇವ ವಾತ ಇವ ಪ್ರವಾಮಿ' ಎಂಬ ವಾಕ್ಯಗಳಿಗೂ ಅವರು ತಿಳಿಸಿರುವ ಅರ್ಥಗಳು ತುಂಬಾ ಅಪೂರ್ವ-ವಾದುವು. ಇರಡು ಸಲ ಅಹಂ ಪದಗಳ ಪ್ರಯೋಗ, 'ಆ' ಎಂಬ ಉಪಸರ್ಗದ ಸಾರ್ಥಕ್ಯ 'ಪರೋ ದಿವಾ ಪರ ಏನಾ ಪೃಥಿವ್ಯಾ' ಎಂಬಲ್ಲಿನ ತೃತೀಯ ವಿಭಕ್ತಿಯ ಔಚಿತ್ಯವನ್ನು ವಿವರಿಸಿರುವ ರೀತಿಯೂ ತುಂಬಾ ಸ್ವರಸವಾಗಿದೆ. ಹೇಳುವ ಅರ್ಥ-ಗಳಿಗೆಲ್ಲ ಯೋಗ್ಯ ಪ್ರಮಾಣಗಳನ್ನು ಉದಾಹರಿಸುವುದು ಈ ವ್ಯಾಖ್ಯಾನದ ವೈಶಿಷ್ಟ್ಯ-ಗಳಲ್ಲೊಂದು. ವಾದಿರಾಜರು ತಮ್ಮ ತಾತ್ಪರ್ಯನಿರ್ಣಯಭಾವಪ್ರಕಾಶಿಕೆಯಲ್ಲಿ ಈ ಸೂಕ್ತದ ಕೆಲವು ಋಕ್ಕುಗಳಿಗೆ ಇನ್ನೂ ಹೆಚ್ಚಿನ ವಿರಗಳನ್ನು ಕೊಟ್ಟಿದ್ದಾರೆ. ಅವುಗಳನ್ನೂ ಸಹ ಆಯಾ ಋಕ್ಕುಗಳ ಅಡಿಟಿಪ್ಪಣಿಯಲ್ಲಿ ಸಂಗ್ರಹಿಸಿಕೊಡಲಾಗಿದೆ. ಒಟ್ಟಿನಲ್ಲಿ ಇದು ಆಚಾರ್ಯ ಮಧ್ವರು ತಮ್ಮ 'ಋಗ್ಭಾಷ್ಯ' ಗ್ರಂಥದಲ್ಲಿ ನಿರ್ದೇಶಿಸಿದ ಮಾರ್ಗದಲ್ಲಿ ಪ್ರಮುಖ ವೈದಿಕಸೂಕ್ತವೊಂದನ್ನು ತುಂಬಾ ಪರಿಣಾಮಕಾರಿಯಾಗಿ ವಿವರಿಸುವ ಒಂದು ಅತ್ಯಂತ ಸಮರ್ಥ ವ್ಯಾಖ್ಯಾನ.

ಇಲ್ಲಿಯ ಅನುವಾದದ ಬಗ್ಗೆ ಒಂದು ಮಾತು. ವಾದಿರಾಜರ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಪ್ರತಿಋಕ್ಕಿಗೂ ಪ್ರತಿಪದಾರ್ಥವನ್ನು, ತಾತ್ಪರ್ಯವನ್ನು ಕೊಟ್ಟು, ಅನಂತರ ವ್ಯಾಖ್ಯಾನದಲ್ಲಿನ ವಿಶೇಷಾಂಶಗಳನ್ನು ಸೂಚಿಸಲಾಗಿದೆ. ಶ್ರೀಮದಾಚಾರ್ಯರು, ಶ್ರೀಜಯತೀರ್ಥರು ಮೊದಲಾದ ಮಹನೀಯರು ಬರೆದಿರುವ ವಿಶೇಷಾಂಶಗಳನ್ನು ಆಯಾ ಋಕ್ಕುಗಳಿಗೆ ಅಡಿಟಿಪ್ಪಣಿಯಾಗಿ ಅಳವಡಿಸಲಾಗಿದೆ. ಗ್ರಂಥವಿಸ್ತಾರಭಯ-ದಿಂದಾಗಿ ಅಡಿಟಿಪ್ಪಣಿಯಲ್ಲಿನ ಹೆಚ್ಚಿನ ಭಾಗಗಳಿಗೆ ಅನುವಾದವನ್ನು ಕೊಟ್ಟಿಲ್ಲ. ಗುರುಮುಖೇನ ಅಧ್ಯಯನ ಮಾಡುವುದರಿಂದ ಈ ಎಲ್ಲಾ ಅಂಶಗಳ ಉಪಯೋಗ-ವನ್ನು ಪಡೆದುಕೊಳ್ಳಬಹುದು.

ಶ್ರೀವಾದಿರಾಜಸ್ವಾಮಿಗಳು ಮಹಾಲಕ್ಷ್ಮಿಯನ್ನು ಕುರಿತು ಅನೇಕ ಸ್ತೋತ್ರಗಳನ್ನು ಸಹ ರಚಿಸಿರುವರು. ಅವುಗಳಲ್ಲಿ ಶ್ರೀಶಗುಣದರ್ಪಣ ಅತ್ಯಂತ ಪ್ರಮುಖವಾದುದು. ಅದರ ವಿಹಿತ ಪಠನೆಯಿಂದ ಸಿದ್ಧಿಪಡೆದವರ ಸಂಖ್ಯೆ ಅಗಾಧವಾಗಿದೆ. ಶ್ರೀಲಕ್ಷ್ಮೀ-ನಾರಾಯಣರನ್ನು ಒಟ್ಟಾಗಿಯೇ ಸ್ತುತಿಸುವ ಈ ಕೃತಿ ಒಂದರ್ಥದಲ್ಲಿ ಅಂಭೃಣೀ ಸೂಕ್ತದ ಸಾರದಂತಿದೆ. ಇವರು ಸರಸಭಾರತೀವಿಲಾಸ ಮೊದಲಾದ ಇತರ ಕೆಲವು ಕೃತಿಗಳಲ್ಲೂ ಮಹಾಲಕ್ಷ್ಮಿಯನ್ನು ಸ್ತುತಿಸಿರುವರು. ಅವೆಲ್ಲವನ್ನೂ ಸಹ ಪರಿಶಿಷ್ಟದಲ್ಲಿ ಸಂಗ್ರಹಿಸಿಕೊಡಲಾಗಿದೆ[೧].

---

೧. ಶ್ರೀವಾದಿರಾಜಸ್ವಾಮಿಗಳು ಕನ್ನಡದಲ್ಲೂ ಅನೇಕ ಕೃತಿಗಳನ್ನು ಮಹಾಲಕ್ಷ್ಮಿಯನ್ನು ಕುರಿತು ರಚಿಸಿರುವರು. ಅವುಗಳಲ್ಲಿ ಲಕ್ಷ್ಮೀಶೋಭನ ಪದ ಅತ್ಯಂತ ಪ್ರಮುಖವಾದುದು. ಕೋಟಿಗಟ್ಟಲೆ ಸಂಖ್ಯೆಯಲ್ಲಿ ಪಾರಾಯಣ ಕಂಡ ಹಿರಿಮೆ ಅದರದ್ದು. ಹರಿದಾಸಸಾಹಿತ್ಯದಲ್ಲಿ ಅತಿಹೆಚ್ಚು ಬಾರಿ ಸಾಮೂಹಿಕವಾಗಿ ಪಠಿಸಲ್ಪಟ್ಟಿರುವ, ಪಠಿಸಲ್ಪಡುತ್ತಿರುವ ಕೃತಿಗಳಲ್ಲಿ ಅದಕ್ಕೇ ಅಗ್ರಸ್ಥಾನ. ಇಂತಹ ಅವರ ಕೃತಿಗಳನ್ನೆಲ್ಲಾ ನಮ್ಮ ಪ್ರಕಾಶನದ "**ಲಕ್ಷ್ಮೀಭಜನಾಮೃತ**" ಕೃತಿಯಲ್ಲಿ ಸಂಗ್ರಹಿಸಿಕೊಡಲಾಗಿದೆ.

ಅಂಭೃಣೀಸೂಕ್ತವು ಉಪಲಬ್ಧವಿರುವ ಎಲ್ಲಾ ವ್ಯಾಖ್ಯಾನಗಳಲ್ಲಿನ ಮುಖ್ಯಾಂಶ-ಗಳನ್ನೂ ಹೊಂದಿ ಹೀಗೆ ಪ್ರಕಟವಾಗುತ್ತಿರುವುದು ಇದೇ ಮೊದಲು. ಆರಂಭದ ಅಭ್ಯಾಸಿಗಳಿಗೆ ಮಾತ್ರವಲ್ಲದೆ, ವಿದ್ವಾಂಸರಿಗೂ ಉಪಯುಕ್ತವಾಗುವ ಅನೇಕ ಅಂಶಗಳು ಈ ಪ್ರಕಟಣೆಯಲ್ಲಿವೆ. ಪ್ರತಿನಿತ್ಯ ದೇವಪೂಜೆಯ ನಿರ್ಮಾಲ್ಯವಿಸರ್ಜನೆಯ ಸಮಯದಲ್ಲಿ ಈ ಅಂಭೃಣೀಸೂಕ್ತವನ್ನು ಪಠಿಸುವ ಸಂಪ್ರದಾಯ ವೈಷ್ಣವರಲ್ಲಿದೆ. ಆದ್ದರಿಂದ ಈ ಸೂಕ್ತಾರ್ಥದ ಪ್ರಕಟಣೆಯು ಅತ್ಯಂತ ಉಪಯುಕ್ತ. ಇದನ್ನು ನನ್ನ ಅನುವಾದದೊಂದಿಗೆ ವ್ಯಾಸನಕೆರೆಯ ಐತರೇಯ ಪ್ರಕಾಶನವು ಒಮ್ಮೆ ಪ್ರಕಟಿಸಿತ್ತು(೧೯೮೦). ಇದರ ದ್ವಿತೀಯಾವೃತ್ತಿಯನ್ನು ಬೆಂಗಳೂರಿನ ವೈಷ್ಣವ ಯುವ ಸೇವಾ ಸಂಘ ಪ್ರಕಟಿಸಿತ್ತು(೧೯೮೯). ೧೯೯೬ರಲ್ಲಿ ಇದರ ತೃತೀಯಾವೃತ್ತಿ ನಮ್ಮ ಪ್ರಕಾಶನದಿಂದ ಬೆಳಕುಕಂಡಿತ್ತು. ಇದೀಗ ಇದರ ನಾಲ್ಕನೆಯ ಆವೃತ್ತಿಯನ್ನು ಶ್ರೀವ್ಯಾಸಮಧ್ವ ಸಂಶೋಧನಾ ಪ್ರತಿಷ್ಠಾನದ ಪ್ರಕಾಶನ ವಿಭಾಗವಾದ ಐತರೇಯ ಪ್ರಕಾಶನವು ಪ್ರಕಾಶನಪಡಿಸುತ್ತಿದೆ.

ಪ್ರಸ್ತುತ ಆವೃತ್ತಿಯಲ್ಲಿ ಇನ್ನೂ ಹೆಚ್ಚಿನ ವಿಶೇಷಾಂಶವನ್ನು ಅಳವಡಿಸಲಾಗಿದೆ. ಶ್ರೀರಾಘವೇಂದ್ರಸ್ವಾಮಿಗಳ ವ್ಯಾಖ್ಯಾನವನ್ನು ಸಮಗ್ರವಾಗಿ ಅಳವಡಿಸಿರುವುದು ವಿಶೇಷಾಂಶ. ಅದರಂತೆ ಪರಿಶಿಷ್ಟದಲ್ಲಿ ಶ್ರೀವಾದಿರಾಜರಿಂದ ರಚಿತವಾದ ಶ್ರೀಮಹಾ-ಲಕ್ಷ್ಮಿಯನ್ನು ಕುರಿತ ಸಂಸ್ಕೃತ ಸ್ತೋತ್ರಗಳ ಸಂಕಲವನ್ನೂ ನೀಡಲಾಗಿದೆ. ಒಟ್ಟಿನಲ್ಲಿ ಈ ಸೂಕ್ತವನ್ನು ಅಧ್ಯಯನಮಾಡುವವರಿಗೆ ಅಗತ್ಯವೆನ್ನಿಸುವ ಮಹತ್ವದ ವಿಚಾರಗಳನ್ನೆಲ್ಲಾ ಒಳಗೊಂಡಿರುವುದು ಈ ಆವೃತ್ತಿಯ ವಿಶೇಷ. ಡಿ.ಟಿ.ಪಿ.ಕಾರ್ಯ ನಮ್ಮ ಪ್ರತಿಷ್ಠಾನದ್ದು. ಸಹಕಾರ ಚಿ॥ ಆನಂದಪದ್ಮನಾಭ, ಶ್ರೀಮತಿ ಭಾಗ್ಯಲಕ್ಷ್ಮಿ ಶ್ರೀಹರಿ ಹಾಗೂ ಶ್ರೀಮತಿ ಶಶಿಕಲಾ ಅವರದ್ದು. ಮುದ್ರಣಕಾರ್ಯ 'ಶ್ರೀರಂಗ ಗ್ರಾಫಿಕ್ಸ್' ಅವರದ್ದು.

ಬೆಂಗಳೂರು
ಶ್ರೀಪುರಂದರದಾಸರ ಪುಣ್ಯದಿನ
೦೨.೦೨.೨೦೧೧

ವ್ಯಾಸನಕೆರೆ ಪ್ರಭಂಜನಾಚಾರ್ಯ

॥ಶ್ರೀಃ॥

ಅಂಭ್ರಣೀಸೂಕ್ತಮ್

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

ಅಹಂ ರುದ್ರೇಭಿರ್ವಸುಭಿಶ್ಚರಾ-
ಮ್ಯಹಮಾದಿತ್ಯೈರುತ ವಿಶ್ವದೇವೈಃ ।
ಅಹಂ ಮಿತ್ರಾವರುಣೋಭಾ ಬಿಭರ್ಮ್ಯ-
ಹಮಿಂದ್ರಾಗ್ನೀ ಅಹಮಶ್ವಿನೋಭಾ ॥೧॥

ಅಹಂ ಸೋಮಮಾಹನಸಂ ಬಿಭ-
ರ್ಮ್ಯಹಂ ತ್ವಷ್ಟಾರಮುತ ಪೂಷಣಂ ಭಗಮ್ ।
ಅಹಂ ದಧಾಮಿ ದ್ರವಿಣಂ ಹವಿಷ್ಮತೇ
ಸುಪ್ರಾವ್ಯೇ೩ ಯಜಮಾನಾಯ ಸುನ್ವತೇ ॥೨॥

ಅಹಂ ರಾಷ್ಟ್ರೀ ಸಂಗಮನೀ ವಸೂನಾಂ
ಚಿಕಿತುಷೀ ಪ್ರಥಮಾ ಯಜ್ಞಿಯಾನಾಮ್ ।
ತಾಂ ಮಾ ದೇವಾ ವ್ಯದಧುಃ ಪುರುತ್ರಾ
ಭೂರಿಸ್ಥಾತ್ರಾಂ ಭೂರ್ಯಾವೇಶಯಂತೀಮ್ ॥೩॥

ಮಯಾ ಸೋ ಅನ್ನಮತ್ತಿ ಯೋ ವಿಪಶ್ಯತಿ
ಯಃ ಪ್ರಾಣಿತಿ ಯ ಈಂ ಶೃಣೋತ್ಯುಕ್ತಮ್ ।
ಅಮಂತವೋ ಮಾಂ ತ ಉಪಕ್ಷಿಯಂತಿ
ಶ್ರುಧಿ ಶ್ರುತ ಶ್ರದ್ಧಿವಂ ತೇ ವದಾಮಿ ॥೪॥

ಅಹಮೇವ ಸ್ವಯಮಿದಂ ವದಾಮಿ
ಜುಷ್ಟಂ ದೇವೇಭಿರುತ ಮಾನುಷೇಭಿಃ ।
ಯಂ ಕಾಮಯೇ ತಂ ತಮುಗ್ರಂ ಕೃಣೋಮಿ
ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್ ॥೫॥(೧)

ಅಹಂ ರುದ್ರಾಯ ಧನುರಾತನೋಮಿ
ಬ್ರಹ್ಮದ್ವಿಷೇ ಶರವೇ ಹಂತವಾ ಉ ।
ಅಹಂ ಜನಾಯ ಸಮದಂ ಕೃಣೋ-
ಮ್ಯಹಂ ದ್ಯಾವಾಪೃಥಿವೀ ಆವಿವೇಶ ॥೬॥

ಅಹಂ ಸುವೇ ಪಿತರಮಸ್ಯ ಮೂರ್ಧನ್
ಮಮ ಯೋನಿರಪ್ಸ್ವಂತಃ ಸಮುದ್ರೇ ।
ತತೋ ವಿತಿಷ್ಠೇ ಭುವನಾ ನು ವಿಶ್ವಾ-
ತಾಮೂಂ ದ್ಯಾಂ ವರ್ಷ್ಮಣೋಪಸ್ಪೃಶಾಮಿ ॥೭॥

ಅಹಮೇವ ವಾತ ಇವ ಪ್ರವಾ-
ಮ್ಯಾರಭಮಾಣಾ ಭುವನಾನಿ ವಿಶ್ವಾ ।
ಪರೋ ದಿವಾ ಪರ ಏನಾ ಪೃಥಿ-
ವ್ಯೈತಾವತೀ ಮಹಿನಾ ಸಂಬಭೂವ ॥ ೮ ॥(೨)

॥ಇತಿ ಅಂಭೃಣೀ ಸೂಕ್ತಮ್(ಋಗ್ವೇದ ೧೦-೧೨೫)॥

★★★★★

ಅಂಭೃಣೀಸೂಕ್ತಮ್

ಶ್ರೀವಾದಿರಾಜಸ್ವಾಮಿಗಳ ವ್ಯಾಖ್ಯಾನ ಸಮೇತ

ವ್ಯಾ || [೧] ಅಂಭೃಣೀಸೂಕ್ತಸ್ಯ[೨] [೩]ಲಕ್ಷ್ಮೀಸೂಕ್ತತ್ವೇ ನಿರುಕ್ತಮೇವ ಪ್ರಮಾಣ-ಯಂತೋ ಯಥಾಶಕ್ತಿ ಸೂಕ್ತಾರ್ಥಂ ವದಾಮಃ । 'ಅಂಭೃಣೀ ವಾಗಾತ್ಮಾನಂ ತುಷ್ಟಾವ' ಇತಿ ನಿರುಕ್ತಾತ್ **ಅಂ** ಪರಮಾತ್ಮಾನಂ ಸ್ವಹೃದಿ ಸ್ವಾಭಿಮನ್ಯಮಾನವೇದ 'ಪ್ರತಿಪಾದ್ಯ- ತ್ವೇನ ಚ ಬಿಭರ್ತಿ । 'ವೇದಗರ್ಭೋ ವಿಭುರ್ವಿಷ್ಣುಃ ಶ್ರೀಮಾನ್ ತ್ರೈಲೋಕ್ಯಭೂಷಣಃ' ಇತಿ ವಿಷ್ಣುನಾಮಸು[೪] ಪಾಠಾತ್ **ಅಂ ಬಿಭರ್ತಿ ನಯತಿ ಚೇತಿ** ವಿಗ್ರಹಃ। ನಯತಿ ವೇದಾಧ್ಯೇತೃಸಜ್ಜನಮನಸ್ಸು ಚೇತಿ ಅಂಭೃಣೀಶಬ್ದವಾಚ್ಯಾ ವಾಗ್ ವೇದಾಭಿಮಾನಿನೀ ಲಕ್ಷ್ಮೀರಾತ್ಮಾನಂ ತುಷ್ಟಾವ । 'ಅ ಇತಿ ಬ್ರಹ್ಮ' ಇತಿ ಶ್ರುತೇಃ[೫] । 'ಭೃಞ್ ಭರಣೇ', 'ಣೀಞ್ ಪ್ರಾಪಣೇ' ಇತಿ ಧಾತೋಶ್ಚ ನಾಪೂರ್ವೋಽಯಮರ್ಥಃ । ರೂಢ್ಯಾ ಅಂಭೃಣೀಶಬ್ದವಾಚ್ಯದೇವತಾಯಾಃ

---

೧. ''ಅಹಂ ಅಷ್ಟೌ ವಾಗಂಭೃಣೀ ತುಷ್ಟಾವಾತ್ಮಾನಂ ಜಗತೀ'' ಇತ್ಯನುಕ್ರಮಣಿಕೋಕ್ತ್ಯನುರೋ-ಧೇನ ಅಹಮಿತ್ಯಷ್ಟರ್ಚಂ ಸೂಕ್ತಮ್ । 'ಅಂಭ್ರಣಸ್ಯ ಮಹರ್ಷೇಃ ದುಹಿತಾ ವಾಙ್ನಾಮ್ನೀ ಅಸ್ಯಸೂಕ್ತಸ್ಯ ಋಷಿಃ । ದ್ವಿತೀಯಾ ಜಗತೀ ಶಿಷ್ಟಾಃ ಸಪ್ತ ತ್ರಿಷ್ಟುಭಃ । ಪರಮಾತ್ಮಾ ದೇವತಾ' ಇತಿ ಕೇಚಿದಾಹುಃ । ತತ್ರಾಂಭ್ರಣಸ್ಯ ದುಹಿತಾ ವಾಙ್ನಾಮ್ನೀ ಋಷಿರಿತ್ಯಯುಕ್ತಮ್ । 'ಶ್ರೀರ್ಭೂರ್ದುರ್ಗಾಂಭ್ರಣೀಹ್ರೀಶ್ಚ ಮಹಾಲಕ್ಷ್ಮೀಶ್ಚ ದಕ್ಷಿಣಾ' ಇತ್ಯಾದಿನಾ ಪ್ರಥಮಬೃಹ-ದ್ಭಾಷ್ಯೋಕ್ತಪೈಂಗಿಶ್ರುತೌ ಲಕ್ಷ್ಮೀಪರ್ಯಾಯತ್ವೇನ ಅಂಭೃಣೀಶಬ್ದಸ್ಯೋಕ್ತ್ಯಾ ತದ್ವಿರೋ-ಧಾತ್ । ಕಿಂತು - ಸ್ವದೃಷ್ಟಂ ಸೂಕ್ತಮಖಿಲಕಾಮದಂ ಹರಿತುಷ್ಟಿದಮ್। ವಾಚೋಽಂಭ್ರಣ್ಯಾಃ ಶ್ರಿಯೋಽಂಗಾನಿ, ಶ್ರೀರ್ಲಕ್ಷ್ಮೀರ್ಮೇಂದಿರಾ ರಮಾ || -ಇತಿ ವಾಚೋ ವಾಗ್ದೇವತಾಯಾಃ ಅಂಭ್ರಣ್ಯಾಃ ಶ್ರಿಯಃ ಸ್ವದೃಷ್ಟಸೂಕ್ತಮಿತಿ ತಂತ್ರಸಾರೋಕ್ತೇಃ, ಶ್ರೀದೇವೀ ಅಸ್ಯ ಸೂಕ್ತಸ್ಯ ಋಷಿಃ । ಸೈವ ಸ್ವಾಂತರ್ಯಾಮಿವಿವಕ್ಷಯಾ 'ಅಹಂ ಚರಾಮಿ' ಇತ್ಯಾದಿ ವಕ್ತೀತ್ಯಾದಿ ಜ್ಞಾತವ್ಯಮ್ । ತ್ರಿಷ್ಟುಪ್ಛಂದೋದೇವತಾ ತು ಇಂದ್ರಾಣೀ । ಜಗತೀದೇವತಾ ವಾರುಣೀ । 'ಸರ್ವದೇವತಾ ಶ್ರಿಯಶ್ಚೈವ ಶ್ರೀಃ' ಇತ್ಯಾದಿ ರೂಪಂ ಚಾಂಗನ್ಯಾಸಃ । - ಶ್ರೀ ರಾಘವೇಂದ್ರಸ್ವಾಮಿಗಳ ವ್ಯಾಖ್ಯಾನ

೨. ಅತ್ರ ಹಿ 'ಯಂ ಕಾಮಯೇ ತಂ ತಮುಗ್ರಂ ಕೃಣೋಮಿ ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ, ಇತ್ಯಾದಿನಾ ಅಸ್ಯಾಃ ಅಂಭೃಣ್ಯಾಃ ವಾಚಃ ಸ್ವೇಚ್ಛಾಮಾತ್ರೇಣ ಬ್ರಹ್ಮರುದ್ರಾದಿ-ಪದದಾತೃತ್ವಂ ಪ್ರತೀಯತೇ । ನ ಚೈತಚ್ಛ್ರಿಯಂ ವಿನಾ ಅನ್ಯಸ್ಯಾಃ ಯುಕ್ತಮ್। ಅನ್ಯಾಸಾಂ ಬ್ರಹ್ಮಸೃಷ್ಟತ್ವಾತ್ । ಅತಃ ಪರಶಕ್ತೇಃ ಶ್ರಿಯ ಏವೇದಂ ವಾಕ್ಯಮಿತಿ ನಿಶ್ಚೀಯತೇ॥
– ಇತಿ ನ್ಯಾಯಸುಧಾಯಾಮ್ (ಪತ್ರ ೯೪, ೧.೧.೧)

೩. 'ಅಂಭ್ರಣೀ, ಆಂಭ್ರಿಣೀ, ಅಂಭ್ರಿಣೀ, ಆಂಭ್ರಣೀ, ಆಂಭೃಣೀ' ಎಂದೂ ಇದನ್ನು ವ್ಯವಹರಿಸುವುದುಂಟು.

೪. ಇದು ವರಾಹಪುರಾಣ ಚಾತುರ್ಮಾಸ್ಯಮಾಹಾತ್ಮ್ಯದಲ್ಲಿನ 'ನಾರಾಯಣಾಷ್ಟೋತ್ತರಶತ-ನಾಮಸ್ತೋತ್ರ'ದ ಮಾತು.

೫. ಐತರೇಯೋಪನಿಷತ್ ೨-೨-೭-೫

ಕ್ವಾಪ್ಯಪ್ರಸಿದ್ಧೇಃ । ಉಕ್ತಯೋಗಾಶ್ರಯಣೇನ ಶ್ರೀರೇವಾತ್ರ ಪ್ರತಿಪಾದ್ಯಾ ನ ತು ಸರಸ್ವತೀ । [೧]ಅಂಭೃಣೀಶಬ್ದವಿರೋಧಾತ್ । ಸರಸ್ವತ್ಯಾದೇಃ ಬ್ರಹ್ಮಲಯೇऽಪಿ ವಿದ್ಯಮಾನವೇದಾಭಿಮಾನಿತ್ವಾಯೋಗಾತ್ । 'ತಂ ಬ್ರಹ್ಮಾಣಂ ಕೃಣೋಮಿ ಅಸ್ಯ ಜಗತಃ ಪಿತರಂ ಸ್ರಷ್ಟಾರಂ ಚತುರ್ಮುಖಂ ಮೂರ್ಧನ್ ಮೂರ್ಧ್ನಿ ಸರ್ವಲೋಕೋಪರಿಸ್ಥಿತಸ್ಯ ಲೋಕಪರಿಪಾಲನಾಯ । ತಾದರ್ಥ್ಯೇ ಸಪ್ತಮೀ । ಸುವೇ = ಯೋನಿದ್ವಾರಾ ಸೃಜಾಮಿ, ಅಪ್ಸ್ವಂತಃ = ಸಮುದ್ರೋದಕ- ಮಧ್ಯೇ । ಮಮ ಯೋನಿಃ ಭರಣಾದೌ ಹೇತುಭೂತೋ ಭರ್ತಾ ನಾರಾಯಣಸ್ತಿಷ್ಠತಿ' ಇತ್ಯಾದಿ ವಕ್ಷ್ಯಮಾಣಸೂಕ್ತಸ್ಥಬಹ್ವರ್ಥಾನಾಂ ಲಕ್ಷ್ಮ್ಯಾ ಅನ್ಯತ್ರಾಯೋಗಾಚ್ಚ ।

ಶ್ರೀವಾದಿರಾಜಸ್ವಾಮಿಗಳ ವ್ಯಾಖ್ಯಾನದ ಅರ್ಥಸಂಗ್ರಹ

ಅಂಭೃಣೀಸೂಕ್ತವು ಲಕ್ಷ್ಮೀಸೂಕ್ತವೆಂಬಲ್ಲಿ 'ಅಂಭೃಣೀ ವಾಗಾತ್ಮಾನಂ ತುಷ್ಟಾವ' ಎಂಬ ನಿರುಕ್ತವೇ ಪ್ರಮಾಣವಾಗಿದೆ. 'ವೇದಗರ್ಭೋ ವಿಭುರ್ವಿಷ್ಣುಃ ಶ್ರೀಮಾನ್ ತ್ರೈಲೋಕ್ಯಭೂಷಣಃ' ಎಂಬುದಾಗಿ ವಿಷ್ಣುನಾಮಗಳಲ್ಲಿ ಬಂದಿರುವುದರಿಂದ ಅಂಭೃಣೀ ಶಬ್ದಕ್ಕೆ 'ಅಂ ಬಿಭರ್ತಿ ನಯತಿ ಚ' ಎಂದು ವಿಗ್ರಹವಾಗುತ್ತದೆ. **ಅಂ** = ಪರಮಾತ್ಮನನ್ನು; **ಬಿಭರ್ತಿ** = ತಾನೇ ಅಭಿಮಾನಿಯಾಗಿರುವ ಸಕಲವೇದಗಳ ಮಹಾತಾತ್ಪರ್ಯ ಎಂಬುದಾಗಿ ಧರಿಸಿರುವವಳು; **ಚ** = ಮತ್ತು **ನಯತಿ** = ವೇದಾಧ್ಯಯನ ಮಾಡತಕ್ಕಂತಹ ಸಜ್ಜನರ ಮನಸ್ಸುಗಳಲ್ಲಿ ಅಂತಹ ಪರಮಾತ್ಮನನ್ನು ನೆಲೆಗೊಳಿಸುವವಳು ಎಂದು 'ಅಂಭೃಣೀ'ಶಬ್ದಕ್ಕೆ ಅರ್ಥವಾಗುತ್ತದೆ. 'ಅ ಇತಿ ಬ್ರಹ್ಮ' ಎಂದು ವೇದಗಳಲ್ಲಿದೆ; 'ಭೃಞ್ ಭರಣೇ' ಮತ್ತು 'ಣೀಞ್ ಪ್ರಾಪಣೇ' ಎಂದು ಧಾತುಪಾಠವಿದೆ. ಆದ್ದರಿಂದ 'ಅಂಭೃಣೀ' ಶಬ್ದಕ್ಕೆ ಮೇಲೆ ಹೇಳಿದ ಅರ್ಥವು ಅಪ್ರಸಿದ್ಧವೇನೂ ಆಗಿರದೆ ಅತ್ಯಂತ ಸಮಂಜಸವೇ ಆಗಿದೆ. 'ಅಂಭೃಣೀ'ಶಬ್ದವಾಚ್ಯಳಾದ ಯಾವ ದೇವತೆಯೂ ರೂಢಿಯಲ್ಲಿ ಕೇಳಿಬರುವುದಿಲ್ಲವಾದ್ದರಿಂದ ಮೇಲೆ ಹೇಳಿದ ರೀತಿಯಲ್ಲಿ ಯೌಗಿಕಾರ್ಥವನ್ನು ಮಾಡುವುದೇ ಉಚಿತವಾಗಿದ್ದು, ಆದರಿಂದ 'ಲಕ್ಷ್ಮೀ'ಯೇ 'ಅಂಭೃಣೀ'ಶಬ್ದವಾಚ್ಯಳು ಎಂಬುದು ಸ್ಪಷ್ಟಪಡುತ್ತದೆ. 'ವಾಕ್' ಎಂಬ ಹೆಸರು ಸರಸ್ವತೀವಾಚಕವಾಗಿ ಪ್ರಸಿದ್ಧ- ವಾಗಿದೆಯಾದರೂ, ಇಲ್ಲಿ ಆ ಅರ್ಥವು ಯೋಗ್ಯವಾಗುವುದಿಲ್ಲ. ಬ್ರಹ್ಮಲಯದಲ್ಲೂ ಸಹ ಇರತಕ್ಕಂತಹ ವೇದಗಳ ಮುಖ್ಯ ಅಭಿಮಾನಿತ್ವವು ಸರಸ್ವತೀ ಮೊದಲಾದವರಿಗೆ ಹೇಗೆ ತಾನೇ ಸರಿಯಾದೀತು? ಅಲ್ಲದೆ ಇದೇ ಸೂಕ್ತದಲ್ಲಿ 'ತಂ ಬ್ರಹ್ಮಾಣಂ ಕೃಣೋಮಿ' 'ಅಹಂ ಸುವೇ ಪಿತರಮಸ್ಯ ಮೂರ್ಧನ್' ಎಂಬುದಾಗಿ ಮುಂದೇ ಹೇಳಲ್ಪಟ್ಟಿದೆ. ಬ್ರಹ್ಮನಿಗೂ ಸೃಷ್ಟಿಕರ್ತೃವಾಗುವ ಸಾಮರ್ಥ್ಯ ಬ್ರಹ್ಮಪತ್ನಿಯಾದ ಸರಸ್ವತಿಗೆ ಹೇಗೆ ತಾನೇ ಅನ್ವಯಿಸುತ್ತದೆ? ಅಲ್ಲದೆ 'ಮಮ ಯೋನಿರಪ್ಸ್ವಂತಃ' ಮೊದಲಾದ ಹಿರಿಮೆಯೂ

---

೧. ಅಸ್ಯ ಸೂಕ್ತಸ್ಯ ಅಂಭೃಣೀವಾಕ್ಯತ್ವಾತ್ ಅಂಭೃಣ್ಯಾಶ್ಚ 'ಶ್ರೀರ್ಭೂರ್ದುರ್ಗಾऽಂಭೃಣೀ ಹ್ರೀಶ್ಚ ಮಹಾಲಕ್ಷ್ಮೀಶ್ಚ ದಕ್ಷಿಣಾ' ಇತಿ ಬೃಹದ್ಭಾಷ್ಯೋಕ್ತಶ್ರುತ್ಯಾ ಲಕ್ಷ್ಮೀಮೂರ್ತಿತ್ವಾತ್ ಇತಿ ಭಾವಃ । - ಎಂಬ ಶ್ರೀರಾಘವೇಂದ್ರಸ್ವಾಮಿಗಳ ಮಾತು (ತತ್ತ್ವಪ್ರಕಾಶಿಕಾ ಭಾವದೀಪ ಪತ್ರ ೨೧) ಇಲ್ಲಿ ಗಮನಾರ್ಹವಾಗಿದೆ.

ಲಕ್ಷ್ಮೀಭಿನ್ನರಾದ ದೇವತೆಗಳಿಗೆ ಸರ್ವಥಾ ಅನ್ವಯಿಸುವುದಿಲ್ಲ ಎಂಬುದನ್ನು ಸಹ ಇಲ್ಲಿ ಗಮನಿಸಬೇಕು. ಆದ್ದರಿಂದ 'ಅಂಭೃಣೀ'ಶಬ್ದವು ಲಕ್ಷ್ಮೀವಾಚಕವೇ ಸರಿ.

ವಿಶೇಷ ಟಿಪ್ಪಣಿಗಳು:

೧. 'ಅಸ್ಯಸೂಕ್ತಸ್ಯ ಅಂಭೃಣೀದೇವತಾಕತ್ವಾತ್ ಅಂಭೃಣ್ಯಾಶ್ಚ ಲಕ್ಷ್ಮೀಮೂರ್ತಿತ್ವಾತ್' - ಇತಿ ತಾತ್ಪರ್ಯಚಂದ್ರಿಕಾಯಾಮ್ (ಪತ್ರ.೧೦೯)

೨. 'ವೇದಾತ್ಮಕತ್ವಾತ್ ವಾಙ್ನಾಮ್ನೀ ಲಕ್ಷ್ಮೀರೇವ ಪ್ರಕೀರ್ತಿತಾ' - ಇತಿ ಐತರೇಯಭಾಷ್ಯೋದಾಹೃತ ಸ್ಮೃತೇಃ (೨/೭/೬) ಮಹಾಲಕ್ಷ್ಮೀರೇವ ಮುಖ್ಯತೋ ವಾಙ್ನಾಮ್ನೀ ಅಂಭೃಣೀ।

ವಾಗಂಭೃಣೀ '೧ ತ್ರಿಷ್ಟುಪ್ ೨ ಜಗತೀ। ಆತ್ಮಾ।

ಋಕ್ - ೧

[1]ಅಹಂ ರುದ್ರೇಭಿರ್ವಸುಭಿಶ್ಚರಾ-
ಮ್ಯಹಮಾದಿತ್ಯೈರುತ ವಿಶ್ವದೇವೈಃ।

---

೧. ತತ್ರಾದ್ಯಾ ಋಕ್ 'ಅಹಂ ರುದ್ರೇಭಿಃ' ಇತಿ - ಅತ್ರಾಹಮಿತಿ ಶ್ರೀದೇವೀವಚನಮ್। ಅಹಮರ್ಥಸ್ಯ ದೇವದೇವೀ ಚೇತನದ್ವಯಸ್ಯ ಕ್ಷೀರನೀರವತ್ ಸಪಿಂಡತ್ವೇನ ಪರಮಮುಖ್ಯಾಮುಖ್ಯವೃತ್ತಿಭ್ಯಾಂ ದ್ವಯೋರಪಿ ವಾಚ್ಯವಾಚಕೋಽತ್ರಾಹಂಶಬ್ದಃ 'ಚರಾಮಿ' ಇತ್ಯುಭಯಪರೋ ಧ್ಯೇಯಃ। ಅಹಂ ರುದ್ರೇಭಿಃ - ರುದ್ರೈಃ 'ರೈವತೋಽಜೋ ಭವೋ ಭೀಮೋ ಉಗ್ರೋ ವೃಷಾಕಪಿರಜೈ- ಕಪಾದಹಿರ್ಬುಧ್ನೋ ಬಹುರೂಪ' ಇತ್ಯೇಕಾದಶರುದ್ರೈಃ ಇತಿ। 'ಅತೋ ಭಿಸ ಐಸ್' 'ಬಹುಲಂ ಛಂದಸಿ' ಇತಿ ಭಿಸ ಐಸ್ತ್ವಾದೇಶಾಭಾವಃ। ವಸುಭಿಃ - ಅಗ್ನಿಪ್ರಮುಖೈರಷ್ಟವಸುಭಿಃ। ಆದಿತ್ಯೈಃ - 'ವಿವಸ್ವಾನರ್ಯಮಾ ಪೂಷಾ' ಇತಿ ಭಾಗವತೋಕ್ತವಿಷ್ಣುವ್ಯತಿರಿಕ್ತೈಕಾದಶಾದಿತ್ಯೈಃ। ವಿಶ್ವೇದೇವೈರುತ ಪುರೂರವಾಃ, ಆರ್ದ್ರವಃ, ಧುರಿರ್ವಿಲೋಚನಃ, ಕಾಮಃ, ಕಾಯನಃ, ಕ್ರತುಃ, ದಕ್ಷಃ, ಸತ್ಯಃ, ವಸುಃ ಇತ್ಯೇವಂ ದಶ ವಿಶ್ವೇದೇವೈರಪಿ। ಯದ್ವಾ ಉತಶಬ್ದಾದನ್ಯೈರ್ಮರುತ್ಪ್ರಭೃತಿಭಿರಪಿ। ಚರಾಮಿ 'ಚರಗತಿಭಕ್ಷಣಯೋಃ ಸಂಚರಾಮಿ ವ್ಯಾಪ್ತತಯಾ ವರ್ತೇ' ಇತ್ಯರ್ಥಃ। ತನ್ನಿಯಾಮಕತಯಾ ವರ್ತ ಇತಿ ವಾ। ತೈಃ ಪರಿವಾರಭೂತೈಃ ಸಹ ವರ್ತ ಇತಿ ವಾ। ಅಹಂ ಮಿತ್ರಾವರುಣಾ - ಮಿತ್ರಾವರುಣೌ। 'ಸುಪಾಂ ಸುಲುಕ್ ಪೂರ್ವಸವರ್ಣಾಚ್ಛೇಯಾಡಾಡ್ಯ- ಯಾಜಾಲ' ಇತಿ ದ್ವಿತೀಯಾಯಾ ಆಕಾರಾದೇಶಃ। ಉಭಾ-ಉಭೌ, ಮಿತ್ರಾವರುಣೌ ಬಿಭರ್ಮಿ। ಉಭಾ - ವಿತ್ಯಗ್ರೇಽಪ್ಯನ್ವೇತಿ। ಅಹಂ ಉಭೌ ಇಂದ್ರಾಗ್ನೀ ಬಿಭರ್ಮಿ। 'ಈದೂದೇ- ದ್ವಿವಚನಂ ಪ್ರಗೃಹ್ಯಮ್' ಇತಿ ಸಂಧ್ಯಭಾವಃ। ಅಹಂ ಅಶ್ವಿನಾ ಉಭೌ - ಅಶ್ವಿನೌ ಬಿಭರ್ಮಿ 'ಭೃಞ್ ಭರಣೇ' ಪುಷ್ಣಾಮೀತ್ಯರ್ಥಃ। ದ್ವಿವಚನೇನೋಭಯೋರ್ಲಾಭೇಽಪಿ 'ಉಭೌ' ಇತ್ಯುಕ್ತಿರ್ಮುಕ್ತಾಮುಕ್ತಾದ್ವಯಲಾಭಾಯ। ಛಾಂದೋಗ್ಯೇ ದಹರವಿದ್ಯಾಯಾಂ 'ಉಭೇಽಸ್ಮಿನ್ ದ್ಯಾವಾಪೃಥಿವೀ ಅಂತರೇವ ಸಮಾಹಿತೇ। ಉಭಾವಗ್ನಿಶ್ಚ ವಾಯುಶ್ಚ' ಇತ್ಯಾದಾವಿವ। ಉಕ್ತಂ ಹಿ ತತ್ರ ಭಾಷ್ಯೇ - 'ಇತ್ಯಾದ್ಯುಭಯಶಬ್ದೋ ಮುಕ್ತಾಮುಕ್ತರಾತ್ಯಪೇಕ್ಷಯಾ' ಇತಿ। ಅಹಮಿತಿ ಪುನರುಕ್ತಿರುಪಚಾರನಿವೃತ್ತ್ಯರ್ಥಾ। ಏವಮಗ್ರೇಽಪಿ ॥ ೧ ॥ - ಶ್ರೀರಾಘ.ವ್ಯಾ.

ಅಹಂ [1]ಮಿತ್ರಾವರುಣೋಭಾ ಬಿಭರ್ಮ್ಯ-
ಹಮಿಂದ್ರಾಗ್ನೀ ಅಹಮಶ್ವಿನೋಭಾ॥ ೧ ॥

ನಾನು ಏಕಾದಶರುದ್ರರಿಂದಲೂ, ಅಷ್ಟವಸುಗಳಿಂದಲೂ ಕೂಡಿಕೊಂಡು ಸಂಚರಿಸುವೆನು. ಅದರಂತೆ ಆದಿತ್ಯರಿಂದಲೂ ವಿಶ್ವೇದೇವತೆಗಳಿಂದಲೂ ಸಹ. ನಾನು ಮಿತ್ರಾವರುಣರನ್ನೂ ಸಂರಕ್ಷಿಸುವೆನು; ಅದರಂತೆ ತ್ವಷ್ಟ್ರುವನ್ನೂ ಭಗನನ್ನೂ ಸಹ.

ವ್ಯಾ ॥ ಅಹಂ [2]**ರುದ್ರೇಭಿಃ** = ಏಕಾದಶರುದ್ರೈಃ[3] ವೇದೋಕ್ತಸಕಲರುದ್ರಪರಿಗ್ರಹಾಯ ಛಾಂದಸಃ ಪ್ರಯೋಗಃ । **ವಸುಭಿಃ** = ಅಷ್ಟವಸುಭಿಃ[4] ಸಹ **ಚರಾಮೀ**ತ್ಯೇಕಾನ್ವಯಃ । ಅತ್ರ ಬಹುಮೂರ್ತೇಸ್ತಸ್ಯಾಃ ಪ್ರತ್ಯೇಕಂ ಮೂರ್ತಾವಪಿ ಸಹ ಸಂಚಾರಸೂಚನಾಯ ದ್ವಿರಹಂಪದಪ್ರಯೋಗಃ। **ಆದಿತ್ಯೈರ್ವಿಶ್ವೇದೇವೈಶ್ಚ** ಸಹ **ಚರಾಮಿ** । ಮಮ ಸಂಚಾರಸಮಯೇ ಏತೇ ಸರ್ವೇ ಮಮಾನುಚರಾಃ ಇತಿ ಭಾವಃ । **ಮಿತ್ರಾವರುಣಾ** = ಮಿತ್ರಾವರುಣೌ **ಉಭಾ** = ಉಭೌ **ಇಂದ್ರಾಗ್ನೀ, ಉಭಾ** = ಉಭೌ । **ಅಶ್ವಿನಾ** = ಅಶ್ವಿನೌ ಚ **ಬಿಭರ್ಮಿ** ॥೧॥

ಅರ್ಥ: ಅಹಂ= ನಾನು; **ರುದ್ರೇಭಿಃ**(ರುದ್ರೈಃ)=ಏಕಾದಶರುದ್ರರಿಂದಲೂ; **ವಸುಭಿಃ**= ಅಷ್ಟವಸುಗಳಿಂದಲೂ (ಸಹ); **ಚರಾಮಿ** = ಕೂಡಿಕೊಂಡು ಸಂಚರಿಸುತ್ತೇನೆ; **ಉತ** = ಮತ್ತು ; **ಅಹಂ**=ನಾನು; **ಆದಿತ್ಯೈಃ**[5]=ಏಕಾದಶಆದಿತ್ಯರಿಂದಲೂ; **ವಿಶ್ವದೇವೈಃ**=ದಶ ವಿಶ್ವೇದೇವತೆಗಳಿಂದಲೂ; (ಸಹ)[6] **ಚರಾಮಿ** = ಕೂಡಿ ಸಂಚರಿಸುವೆ; **ಅಹಂ** = ನಾನು;

---

೧. 'ಅಹಂ ಮಿತ್ರಾವರುಣೋಭಾ ಬಿಭರ್ಮಿ' ಇತ್ಯಾದಿ ಮಿತ್ರಾವರುಣೌ ಇತಿ ದ್ವಿವಚನೇ ಸತ್ಯಪಿ ಪುನರುಭಾವಿತ್ಯುಕ್ತ್ಯಾ ಮುಕ್ತಾಮುಕ್ತವರುಣಾದಿಗ್ರಹಣಮಭಿಪ್ರೇತಂ ... । ಏತೇನ ಯಜ್ಞೇಷ್ವಭಿಷ್ಟೂಯಮಾನಸೋಮಾಭಿಮಾನಿನಂ ಚಂದ್ರಂ ತ್ವಷ್ಟಾರಂ ಇತ್ಯಾದಾವಪಿ ಉಭಯವಿಧಮಿತಿ ಗ್ರಾಹ್ಯಮಿತಿ ಸೂಚಿತಂ ಭವತಿ। – ಇತಿ ಸತ್ತತ್ತ್ವರತ್ನಮಾಲಾಯಾಂ (ಪತ್ರ. ೮೬)

೨. ರುದ್ರಾದ್ಯೈಃ ಪರಿವೃತಾ – ಇತಿ ಪ್ರಮೇಯದೀಪಿಕಾಯಾಮ್(೧೨) ॥

೩. **ಏಕಾದಶರುದ್ರರು :** ಪ್ರಧಾನ ರುದ್ರದೇವರು, ರೈವತ, ಅಜ, ಭವ, ಭೀಮ, ವಾಮ, ಉಗ್ರ, ವೃಷಾಕಪಿ, ಅಜೈಕಪಾತ್, ಅಹಿರ್ಬುಧ್ನಿ ಮತ್ತು ವಿರೂಪಾಕ್ಷ (ಇವರಲ್ಲಿ ಕೆಲವರಿಗೆ ಸದಾಶಿವ, ವಿರೂಪಾಕ್ಷ, ಪತ್ರತಾಪ ಮತ್ತು ವಿಷ್ಕಂಭ ಎಂಬ ನಾಮಾಂತರಗಳಿವೆ).

೪. **ಅಷ್ಟವಸುಗಳು :** ಅಗ್ನಿ, ದ್ರೋಣ, ಪ್ರಾಣ, ಧ್ರುವ, ಅರ್ಕ, ದೋಷ, ವಸ್ತು ಮತ್ತು ವಿಭಾವಸು. (ಇವರಲ್ಲಿ ಅಷ್ಟಮವಸುವಿಗೆ **ದ್ಯು** ಎಂಬ ಹೆಸರೂ ಇದೆ.) ''ಅಥಾಷ್ಟಮೋ ವಸುರಾಸೀತ್ ದ್ಯುನಾಮಾ'' – ಮ.ಭಾ.ತಾ.ನಿ (೧೧/)

೫. **ದ್ವಾದಶಾದಿತ್ಯರು :** ವಿವಸ್ವಾನ್, ಆರ್ಯಮಾ, ಪೂಷನ್, ತ್ವಷ್ಟೃ, ಸವಿತೃ, ಭಗ, ಧಾತೃ, ಪರ್ಜನ್ಯ, ವರುಣ, ಮಿತ್ರ, ಶುಕ್ರ ಮತ್ತು ಉರುಕ್ರಮ (ಇವರಲ್ಲಿ 'ಉರುಕ್ರಮ'ನಾಮಕ ಆದಿತ್ಯನು ಸಾಕ್ಷಾತ್ ವಿಷ್ಣುವೇ ಆಗಿದ್ದಾನೆ. ಆದ್ದರಿಂದ ಉಳಿದ ಹನ್ನೊಂದು ಆದಿತ್ಯರು ಮಾತ್ರವೇ ಮಹಾಲಕ್ಷ್ಮಿಯ ಅನುಚರರು ಎಂದು ಅಭಿಪ್ರಾಯ).

೬. 'ಸಹಯುಕ್ತೇಽಪ್ರಧಾನೇ'(೨.೩.೧೯) ಎಂಬ ವ್ಯಾಕರಣಸೂತ್ರವು ಈ ಅರ್ಥವನ್ನು ಪುಷ್ಟೀಕರಿಸುತ್ತದೆ.

ಮಿತ್ರಾವರುಣಾ = ಮಿತ್ರಾವರುಣೌ= ಮಿತ್ರಾವರುಣರು; [೧]**ಉಭಾ** = ಉಭೌ = ಇಬ್ಬರನ್ನೂ; **ಅಹಂ** = ನಾನು; **ಉಭಾ** = ಉಭೌ = ಇಬ್ಬರು; **ಇಂದ್ರಾಗ್ನೀ** = ಇಂದ್ರ ಮತ್ತು ಅಗ್ನಿಯರನ್ನು; **ಅಶ್ವಿನಾ** = ಅಶ್ವಿನೀ ದೇವತೆಗಳನ್ನು(ಕೂಡ); **ಬಿಭರ್ಮಿ** = ಭರಣ ಮಾಡುತ್ತೇನೆ.

ಭಾವಾರ್ಥ : ನಾನು ಏಕಾದಶರುದ್ರರಿಂದಲೂ, ಅಷ್ಟವಸುಗಳಿಂದಲೂ, ಏಕಾದಶ ಆದಿತ್ಯರಿಂದಲೂ, [೨]ದಶ ವಿಶ್ವೇದೇವತೆಗಳಿಂದಲೂ ಕೂಡಿಕೊಂಡು ಸಂಚರಿಸುತ್ತೇನೆ. ನಾನು ಮಿತ್ರಾವರುಣರನ್ನು, ಇಂದ್ರ ಅಗ್ನಿಗಳನ್ನು ಮತ್ತು ಅಶ್ವಿನೀ ದೇವತೆಗಳನ್ನು ಕೂಡ ಭರಣ ಮಾಡುತ್ತೇನೆ.

ವಿಶೇಷಾಂಶಗಳು:

೧. ವೇದೋಕ್ತರಾದ ಸಕಲರುದ್ರರನ್ನು ಇಲ್ಲಿ ಗ್ರಹಿಸಬೇಕು ಎಂದು ಸೂಚಿಸಲು, ಇಲ್ಲಿ 'ರುದ್ರೇಭಿಃ' ಎಂಬುದಾಗಿ ಛಾಂದಸ ಪ್ರಯೋಗವು ಬಂದಿದೆ.

೨. ಬಹುರೂಪಳಾದ ತಾನು ಪ್ರತಿಯೊಬ್ಬರಲ್ಲಿಯೂ ಪ್ರತ್ಯೇಕವಾಗಿ ಸಂಚರಿಸುವ ಸಾಮರ್ಥ್ಯವನ್ನು ಹೊಂದಿದ್ದೇನೆ ಎಂದು ಸೂಚಿಸಲು, 'ಅಹಂ' 'ಅಹಂ' ಎಂದು ಎರಡು ಸಲ ಬಂದಿದೆ.

೩. (ಸಹ) ಚರಾಮಿ ಎಂದರೆ 'ನನ್ನ ಸಂಚಾರಸಮಯದಲ್ಲಿ ಇವರೆಲ್ಲರೂ ನನಗೆ ಅನುಚರರಾಗಿರುತ್ತಾರೆ' ಎಂದು ಭಾವ.

ವಿಶೇಷ ಟಿಪ್ಪಣಿಗಳು:

೧. 'ಶ್ರಿಯಂ ಲೋಕೇ ದೇವಜುಷ್ಟಾಮುದಾರಾಮ್' – ಇತಿ ಶ್ರೀಸೂಕ್ತೇ.

೨. ಯಸ್ಯಾಃ ಕಟಾಕ್ಷಯುತಭಾಗದೃಷ್ಟ್ಯಾ
ಬ್ರಹ್ಮಾ ಶಿವಃ ಸ್ವರ್ಗಪತಿರ್ಮಹೇಂದ್ರಃ ।
ಚಂದ್ರಶ್ಚ ಸೂರ್ಯೋ ಧನದೋ ಯಮೋಽಗ್ನಿಃ
ಪ್ರಭೂತಮೈಶ್ವರ್ಯಮಥಾಪ್ನುವಂತಿ ।

– ಇತಿ ಶ್ರೀ ಪದ್ಮಪುರಾಣೇ (ಉತ್ತರಖಂಡ – ಅ.೨೨೭ ಶ್ಲೋ.೨೩ – ಕಲ್ಕತ್ತ ಮುದ್ರಣ). ಇದು ಎರಡನೆಯ ಋಕ್ಕಿಗೂ ಸಹ ಅನ್ವಯಿಸುತ್ತದೆ.

---

೧. 'ದ್ವಿವಚನೇನೈವ ದ್ವಿತ್ವೇ ಸಿದ್ಧೇ ಪುನರುಭೇತಿ ವಚನಂ ಮುಕ್ತಾಮುಕ್ತೋಭಯಗ್ರಹಣಾರ್ಥಮ್' ಎಂದು ಭಗವಂತರಾಯರ ವ್ಯಾಖ್ಯಾನವಿದೆ. ದ್ವಿವಚನಪ್ರಯೋಗದಿಂದಲೇ 'ಇಬ್ಬರು' ಎಂದು ಅರ್ಥಬಂದರೂ, ಮತ್ತೊಮ್ಮೆ 'ಉಭಾ' ಎಂದಿರುವುದು ಮುಕ್ತ ಮತ್ತು ಅಮುಕ್ತರಾದ ಆ ಎಲ್ಲಾ ದೇವತೆಗಳನ್ನು ಸೂಚಿಸಲು, ಎಂದು ಅದರ ಅರ್ಥ.

೨. **ದಶ ವಿಶ್ವೇದೇವತೆಗಳು :** ಕ್ರತು, ದಕ್ಷ, ಸವ, ಸತ್ಯ, ಕಾಮ, ಕಾಲ, ಧುರಿ, ಲೋಚನ, ಪುರೂರವ ಮತ್ತು ಆರ್ದ್ರವ.

ಋಕ್ - ೨

[1]ಅಹಂ ಸೋಮಮಾಹನಸಂ ಬಿಭ-
ರ್ಮ್ಯಹಂ ತ್ವಷ್ಟಾರಮುತ ಪೂಷಣಂ ಭಗಮ್ ।
ಅಹಂ ದಧಾಮಿ ದ್ರವಿಣಂ ಹವಿಷ್ಮತೇ
ಸುಪ್ರಾವ್ಯೇ[2] ಯಜಮಾನಾಯ ಸುನ್ವತೇ ॥ ೨ ॥

ನಾನು ಸೋಮನನ್ನೂ, ಸೋಮರಸವನ್ನು ಧರಿಸುವೆನು, ಅಲ್ಲದೆ ತ್ವಷ್ಟೃವನ್ನೂ ಪೂಷನನ್ನು, ಭಗನನ್ನೂ ಧರಿಸುವೆನು. ಹವಿಸ್ಸನ್ನು ನೀಡುತ್ತ ವಿಷ್ಣು ಮೊದಲಾದ ದೇವತೆಗಳಿಗೆ ಸಂತೋಷನೀಡುವ ಸೋಮರಸ ಸುರಿಸುವ ಯಜಮಾನನಿಗೆ ಸಂಪತ್ತನ್ನು ನೀಡುವೆನು.

ವ್ಯಾ ॥ ಆಹನಸಂ = ಆಸಮಂತಾತ್ ಹನ್ಯತೇ ಇತಿ ಆಹನಾಃ ಆಸಮಂತಾತ್ ಹನ್ಯಮಾನಸೋಮಲತಾಭಿಮಾನಿನಮಿತ್ಯರ್ಥಃ । **ಸೋಮಂ** = ಚಂದ್ರಂ; **ತ್ವಷ್ಟಾರಂ** = ವಿಶ್ವಕರ್ಮಾಣಂ ತ್ವಷ್ಟೃನಾಮಕಸೂರ್ಯಂ ವಾ ಪೂಷಣಂ; **ಉತ** = ಪೋಷಣಂ ಚ । **ಭಗಂ** = ಭಗನಾಮಕಂ ಚ । ಏತಾವಪಿ ಸೂರ್ಯೌ । ವಿಷ್ಣಿಗೃಹೀತಾನಾಂ ಪೂರ್ವಋಚ್ಯುಕ್ತರುದ್ರಾದೀನಾಂ ನ ಮಯಾ ಸಹ ಸಂಚರಣಮ್ । ಕಿಂತು ಧನದಾನಾದಿ ಪೋಷಿತಾನಾಮೇವೇತಿ ಸೂಚನಾಯ ಬಿಭರ್ಮ್ಯೇತ್ಯುತ್ತರಋಚ್ಯಪಿ ಪ್ರಾಗಾದಿತ್ಯಶಬ್ದೋಕ್ತಪೂಷಾದೀನಾಮೇವ ಸರ್ವೋಪಲಕ್ಷಕತಯಾ ಪುನರ್ವಚನಮ್ । ಅತ್ರೈವೋಕ್ತೇಂದ್ರಾದೀನಾಂ ಚ ಬಾಲ್ಯತ್ವಾದೇವ ಲಕ್ಷ್ಮ್ಯನುಚರತ್ವಂ ಜ್ಞೇಯಮ್ । ಭರಣಂ ಚ ನಾಧಾರಾಧೇಯಭಾವೇನ, ಕಿಂತು ದ್ರವ್ಯದಾನೇನ ಚ ಇತ್ಯಾಹ - **ಅಹಮಿತಿ** । **ಸುಪ್ರಾವ್ಯೇ** = ಸುಷ್ಠು

---

೧. ಅಹಂ ಸೋಮಮ್ ಇತಿ ದ್ವಿತೀಯಾ । ಆಹನಸಮ್ - ಅಭಿಷೂಯಮಾಣಂ ಸೋಮಂ-ಚಂದ್ರಮ್ । 'ಹನ-ಹಿಂಸಾಗತ್ಯೋಃ' ಇತಿ ಧಾತೋಃ ಹನನಮಭಿಷವಃ । ಸ ಚ ಸೋಮಲತಾಯಾ ಏವ । ಲತಾಭಿಮಾನಿತ್ವಾಚ್ಚಂದ್ರೋಽಪ್ಯಾಹನಸಮಿತ್ಯುಕ್ತಃ । ಅಹಂ ಬಿಭರ್ಮಿ । ಉತ - ಕಿಂಚ, ತ್ವಷ್ಟಾರಂ ಪೂಷಣಂ ಭಗಮಹಂ ಬಿಭರ್ಮಿ । ಹವಿಷ್ಮತೇ - ವಪಾಪುರೋಡಾಶಾದಿಹವಿರ್ಯುಕ್ತಾಯ । ಸುಪ್ರಾವ್ಯೇ - ಅವತೇ ರಕ್ಷಣಗತ್ಯಾದ್ಯನೇಕಾರ್ಥತ್ವಾದಿಹ ತೃಪ್ತ್ಯರ್ಥಾದುಪಸರ್ಗದ್ವಯಪೂರ್ವಕಾದವತೇಃ 'ಅವಿತೃಸವಿತೃಭ್ಯಃ' ಇತೀಕಾರಪ್ರತ್ಯಯೇ ಚತುರ್ಥ್ಯೇಕವಚನೇ ಪರತೋ ಯಣಾದೇಶೇ ಸುಪ್ರಾವ್ಯೇ ಇತಿ ರೂಪತ್ವಾತ್ ಸುಷ್ಠು ಪ್ರಕರ್ಷೇಣಾವಿತ್ರೇ ಶೋಭನಹವಿರ್ದಾನೇನ ವಿಷ್ಣುಪ್ರಭೃತಿದೇವಾನಾಂ ತರ್ಪಕಾಯ ಇತ್ಯರ್ಥಃ । ಸುನ್ವತೇ - ಸೋಮಾಭಿಷವಂ ಕುರ್ವತೇ ಸೋಮಯಾಜಿನೇ ಯಜಮಾನಾಯ ದ್ರವಿಣಂ ಜ್ಞಾನಧನರೂಪದೈವಮಾನುಷವಿತ್ತಂ ದಧಾಮಿ 'ಡು ಧಾಞ್-ಧಾರಣೇ' ಧೃತವತ್ಯಸ್ಮಿ । ದಾತುಮಿತಿ ಶೇಷಃ । ದದಾಮೀತಿ ವಾ ॥ ೨ ॥ - ಶ್ರೀರಾಘ.ವ್ಯಾ.

೨. ಸುಪ್ರಾವ್ಯೇ ಸುಷ್ಠು ಪ್ರಕರ್ಷೇಣ ಅವನಾರ್ಥಮ್ । -ಇತಿ ಭ.ವ್ಯಾ.

ಪ್ರಕರ್ಷೇಣ ರಾಜಾದಿಭ್ಯೋಽತಿಶಯೇನಾಂತರಪಿ ಸ್ಥಿತ್ವಾ ಇತ್ಯರ್ಥಃ । **ಅವ್ಯೇ** = ರಕ್ಷಣಯೋಗ್ಯೇ ಇತಿ ಲೋಕತ್ರಯಸಂಗ್ರಾಹಕಮ್ । ಪ್ರಮಾಮನುಪಮ್ಯೈವ ದದಾಮೀತಿ ಸೂಚನಾಯ ಲೋಕ ಇತ್ಯನುಕ್ತ್ವಾ ಅವ್ಯೇ ಇತ್ಯುಕ್ತಮ್ । **ಸುನ್ವತೇ** = ಸೋಮಸವನಂ ಕುರ್ವತೇ । **ಹವಿಷ್ಮತೇ** = ಯಜ್ಞಯೋಗ್ಯಬಹ್ವನ್ನವತೇ । **ಯಜಮಾನಾಯ** = ಬ್ರಹ್ಮೇಂದ್ರಾದಿರೂಪ ಯಜಮಾನಾಯ **ದ್ರವಿಣಂ ದಧಾಮಿ**। [೧]'ತೃತೀಯೋಽತಿಶಯೇ' ಇತಿ ಮಹಾವ್ಯಾಕರಣವಚನಾತ್ ಅತಿಶಯೇನ ದದಾಮಿ । ದತ್ತಂ ಚ 'ಡುಧಾಞ್ ಧಾರಣ ಪೋಷಣಯೋಃ' ಇತಿ ಧಾತೋಃ । **ದಧಾಮಿ** = ಧಾರಯಾಮಿ ಚೋರಾದಿಭಯಂ ನಿವಾರ್ಯ ರಕ್ಷಾಮಿ ವೃದ್ಧ್ಯಾದಿನಾ ಪೋಷಯಾಮಿ ಚ ॥ ೨ ॥

ಅರ್ಥ : ಅಹಂ = ನಾನು; **ಆಹನಸಂ** = ಎಲ್ಲೆಡೆಗಳಿಂದಲೂ ಹಿಂಡಲ್ಪಡುವ ಸೋಮಲತೆಗೆ ಅಭಿಮಾನಿಯಾದ; **ಸೋಮಂ** = ಚಂದ್ರನನ್ನು; **ತ್ವಷ್ಟಾರಂ** = ವಿಶ್ವಕರ್ಮನನ್ನು ಅಥವಾ ತ್ವಷ್ಟ್ರುನಾಮಕ ಸೂರ್ಯನನ್ನು; **ಬಿಭರ್ಮಿ**= ಪಾಲಿಸುತ್ತೇನೆ; **ಅಹಂ** = ನಾನು; **ಸುಪ್ರಾವ್ಯೇ** = ಅತ್ಯಂತ ಹೆಚ್ಚಾಗಿ ಸಂರಕ್ಷಿಸಲ್ಪಡಬೇಕಾದ ಮೂರು ಲೋಕಗಳಲ್ಲೂ (ನೆಲೆಸಿದ್ದು); **ಸುನ್ವತೇ** = ಸೋಮರಸವನ್ನು ಅರ್ಪಿಸುವ; **ಹವಿಷ್ಮತೇ** = ಯಜ್ಞಯೋಗ್ಯವಾದ ಬಹುವಿಧ ಅನ್ನವನ್ನು ಹೊಂದಿರತಕ್ಕಂತಹ; **ಯಜಮಾನಾಯ** = ಬ್ರಹ್ಮ, ಇಂದ್ರ ಮೊದಲಾದ ಯಜ್ಞಶೀಲರಿಗೆ; **ದ್ರವಿಣಂ** = ಐಶ್ವರ್ಯವನ್ನು; **ದಧಾಮಿ** = ಅತಿಶಯವಾಗಿ ಕೊಡುತ್ತೇನೆ.

ತಾ॥ ನಾನು ಸೋಮಲತೆಗೆ ಅಭಿಮಾನಿಯಾದ ಚಂದ್ರನನ್ನು, ತ್ವಷ್ಟೃ, ಪೂಷಣ ಮತ್ತು ಭಗ ಮೊದಲಾದವರನ್ನು ಕೂಡ ಪಾಲಿಸುತ್ತೇನೆ. ನಾನು ಅತ್ಯಂತ ಹೆಚ್ಚಾಗಿ ಸಂರಕ್ಷಿಸಲ್ಪಡಬೇಕಾದ ಮೂರುಲೋಕಗಳಲ್ಲೂ ನೆಲೆಸಿದ್ದು ಸೋಮರಸವನ್ನು ಅರ್ಪಿಸುವ, ಯಜ್ಞಯೋಗ್ಯವಾದ ಬಹುವಿಧ ಅನ್ನವನ್ನು ಹೊಂದಿರುವ, ಬ್ರಹ್ಮ, ಇಂದ್ರ ಮೊದಲಾದ ಯಜ್ಞಶೀಲರಿಗೆಲ್ಲ ಐಶ್ವರ್ಯವನ್ನು ಅತಿಶಯವಾಗಿ ಕೊಡುತ್ತೇನೆ.

ವಿಶೇಷ ಟಿಪ್ಪಣಿಗಳು:

ತಯಾ ಸಂವರ್ಧಿತಾಭ್ಯಶ್ಚ ಪ್ರಜಾಭ್ಯೋ ಭವದಾದಯಃ ।
ವಿಲಸಂತೀಶಶಕ್ರಾದ್ಯಾಃ ಸಸುಪ್ರಸ್ತ್ರಬಾಂಧವಾಃ ॥★

– ಇತಿ ಮಹಾದೇವಂ ಪ್ರತಿ ಪಾರ್ವತೀವಚನಂ ಪದ್ಮಪುರಾಣೇ (ವಾಸುದೇವ ಸಹಸ್ರನಾಮಸು ಉತ್ತರಖಂಡ – ಅ.೭೧ ಶ್ಲೋ. ೩.೨೪)

೧. ಇದು ಶ್ರೀಮದಾಚಾರ್ಯರಿಂದ ಭಾಗವತತಾತ್ಪರ್ಯಾದಿಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಮಹಾವ್ಯಾಕರಣಸೂತ್ರ.

★ ಈ ಗುರುತಿನ ಶ್ಲೋಕಗಳು ಶ್ರೀವಾದಿರಾಜರಿಂದ 'ಉಪನ್ಯಾಸರತ್ನಮಾಲಾ' ಗ್ರಂಥ (೧.ಪು. ೩,೪)ದಲ್ಲಿ ಉದಾಹರಿಸಲ್ಪಟ್ಟಿವೆ.

ವಿಶೇಷಾಂಶಗಳು:

೧. ರುದ್ರಾದಿದೇವತೆಗಳು ನನ್ನ ಜೊತೆಗೆ ಸಂಚರಿಸುವುದು ನಾನು ಧನಧಾನ್ಯಾದಿಗಳಿಂದ ಅವರನ್ನೆಲ್ಲ ಪೋಷಿಸುತ್ತಿರುವುದರಿಂದಲೇ ಹೊರತು 'ವೇತನದಿಂದಾಗಿ ಏನೂ ಅಲ್ಲ' ಎಂದು ಸೂಚಿಸಲು, ಹಿಂದಿನ ಋಕ್ಕಿನಲ್ಲಿ ಆದಿತ್ಯ ಶಬ್ದದಿಂದ ಉಕ್ತರಾದ ಪೂಷಾದಿಗಳನ್ನು ಈ ಋಕ್ಕಿನಲ್ಲಿ ಮತ್ತೊಮ್ಮೆ ಹೇಳಲಾಗಿದೆ. ಇಲ್ಲಿಯ 'ಪೂಷನ್' ಮೊದಲಾದ ಪದಗಳಿಂದ ರುದ್ರ, ಇಂದ್ರ ಮೊದಲಾದ ಇತರರನ್ನೂ ಗ್ರಹಿಸಬೇಕು. ರುದ್ರೇಂದ್ರಾದಿ ದೇವತೆಗಳೆಲ್ಲ ಲಕ್ಷ್ಮೀದೇವಿಯ ಅನುಚರರಾಗಿರುವುದು ಅವರೆಲ್ಲ ಲಕ್ಷ್ಮೀದೇವಿಯಿಂದ ರಕ್ಷಿತರಾಗಿರುವುದರಿಂದಲೇ ಎಂದು ಭಾವ.

೨. **'ಅಹಂ ದಧಾಮಿ'** ಎಂಬ ಮಾತಿನಿಂದ ಇಂದ್ರಾದಿದೇವತೆಗಳಿಗೆಲ್ಲ ಲಕ್ಷ್ಮೀದೇವಿಯಿಂದ ದೊರೆಯುವ 'ಭರಣ'ವು, ಆಶ್ರಯ-ಆಶ್ರಯೀ ಭಾವದಿಂದ ಮಾತ್ರವೇ ಅಲ್ಲದೆ ದ್ರವ್ಯದಾನಾದಿಗಳ ಮೂಲಕವೂ ಆಗಿದೆ ಎಂಬುದು ಸ್ಪಷ್ಟಪಡುತ್ತದೆ.

೩. **ಅವ್ಯೇ** ಎಂದರೆ 'ರಕ್ಷಣೆಗೆ ಯೋಗ್ಯವಾದ ಮೂರು ಲೋಕಗಳಲ್ಲಿ' ಎಂದರ್ಥ. ಇಲ್ಲಿ 'ಲೋಕೇ' ಎನ್ನುವುದಕ್ಕೆ ಬದಲಾಗಿ, ಅವ್ಯೇ ಎಂದು ಪ್ರಯೋಗಿಸಿರುವುದು 'ನಾನು ಯಥಾರ್ಥಜ್ಞಾನವನ್ನು ನಾಶಮಾಡದೆ ತತ್ತ್ವಜ್ಞಾನ ಸಮೇತವಾಗಿಯೇ ಇವರಿಗೆಲ್ಲ ಐಶ್ವರ್ಯವನ್ನು ಕೊಡುತ್ತೇನೆ' ಎಂಬುದನ್ನು ಸೂಚಿಸಲು.

೪. **'ದಧಾಮಿ'** ಎಂಬ ಪ್ರಯೋಗಕ್ಕೆ 'ತೃತೀಯೋಽತಿಶಯೇ' ಎಂಬ ಮಹಾ-ವ್ಯಾಕರಣದ ಮಾತಿನಿಂದ 'ಅತಿಶಯವಾಗಿ ಕೊಡುತ್ತೇನೆ' ಎಂದು ಅರ್ಥವಾಗುತ್ತದೆ.

೫. **'ದಧಾಮಿ'** ಎಂಬುದಕ್ಕೆ 'ಧಾರಯಾಮಿ' ಎಂದೂ ಅರ್ಥವಾಗುತ್ತದೆ. ಆಗ 'ಡುಧಾಞ್' 'ಧಾರಣಪೋಷಣಯೋಃ' ಎಂಬ ಧಾತುಕೋಶದಿಂದಾಗಿ 'ನಾನು ರುದ್ರಾದಿದೇವತೆಗಳಿಗೆ ಸಂಪತ್ತನ್ನು ಕೊಡುವುದು ಮಾತ್ರವಲ್ಲದೆ, ಹಾಗೆ ಕೊಟ್ಟ ಸಂಪತ್ತನ್ನು ಚೋರಾದಿಗಳ ಭಯವನ್ನು ತಪ್ಪಿಸಿ, ವೃದ್ಧಿಗೊಳಿಸಿ ಪೋಷಿಸುತ್ತೇನೆ ಸಹ' ಎಂದು ಅಭಿಪ್ರಾಯ. ಸಂಪತ್ತಿನ ಯೋಗಕ್ಷೇಮ ವಹಿಸುವೆ ಎಂಬ ಭಾವ.

ಋಕ್ - ೩

ಅಹಂ ರಾಷ್ಟ್ರೀ ಸಂಗಮನೀ ವಸೂನಾಂ
[೧]ಚಿಕಿತುಷೀ ಪ್ರಥಮಾ ಯಜ್ಞಿಯಾನಾಮ್ ।
ತಾಂ ಮಾ ದೇವಾ ವ್ಯದಧುಃ ಪುರುತ್ರಾ
ಭೂರಿಸ್ಥಾತ್ರಾಂ ಭೂರ್ಯಾವೇಶಯಂತೀಮ್[೨]॥ ೩ ॥

೧. ಕಿತ್ ನಿವಾಸೇ ಇತಿ ಧಾತೋಃ - ಇತಿ ಭ.ವ್ಯಾ

೨. ಅಹಂ ರಾಷ್ಟ್ರೀ ಸಂಗಮನೀ ಇತಿ ತೃತೀಯಾ । ರಾಷ್ಟ್ರೀ-ಸರ್ವಸ್ವಾಮಿನೀ। ವಸೂನಾಮ್ -ದೈವಮಾನುಷವಿತ್ತಾನಾಮ್, ಸಂಗಮನೀ-ಸಂಗಮಯಿತ್ರೀ। ಉಪಾಸಕಾನಾಂ ಪ್ರಾಪಯಿತ್ರೀ ।

ನಾನು ರಾಷ್ಟ್ರಕ್ಕೆ ಅಭಿಮಾನಿನಿ. ಧನಧಾನ್ಯರತ್ನಾದಿಗಳನ್ನು ಒದಗಿಸಿಕೊಡುವವಳು. ಯಜ್ಞಾರ್ಹವಾದ ಇತರ ದ್ರವ್ಯಗಳನ್ನು ನಿರ್ಮಿಸುವವಳು. ಬ್ರಹ್ಮಾದಿ ಜಗತ್ತನ್ನು ಪಾಲಿಸುವವಳು. ನನ್ನನ್ನು ಅವರವರ ಯೋಗ್ಯತೆಗೆ ತಕ್ಕಂತೆ ಬಹುವಿಧ ದ್ರವ್ಯವನ್ನು ಅವರವರ ಮನೆಗಳಲ್ಲಿ ನೆಲೆಗೊಳಿಸುವವಳು.

ವ್ಯಾ|| ರಾಷ್ಟ್ರಾದೇವ ದ್ರವ್ಯಸಂಪತ್ತಿಃ ಕಿಂತ್ವಯೇತ್ಯಾಶಂಕಾಂ ವಾರಯಿತುಮಾಹ- **ಅಹಂ ರಾಷ್ಟ್ರೀತಿ** । [೧]**ಅಹಂ ರಾಷ್ಟ್ರೀ** = ಭೂರೂಪೇಣ ರಾಷ್ಟ್ರಾಭಿಮಾನಿನೀ । **ವಸೂನಾಂ** = ಧನಧಾನ್ಯರತ್ನಾದೀನಾಂ । **ಸಂಗಮನೀ** = ಸಮ್ಯಕ್ ಪ್ರಾಪಯಂತೀ । **ಯಜ್ಞಿಯಾನಾಂ** =ವಸೂನಾಂ । **ಪ್ರಥಮಾ** = ಆದಿಭೂತಾ । **ಚಿಕಿತುಷೀ** ಕರ್ತ್ರೀ । ಪುಣ್ಯಹೇತುತ್ವಾತ್ ಯಜ್ಞಯೋಗ್ಯವಸೂನಾಮಿತರದ್ರವ್ಯೇಭ್ಯೋಽಪಿ ಆದಿತ ಏವ ಕರ್ತ್ರೀ ಇತ್ಯರ್ಥಃ । ಧನಾದಿದಾನಂ ಚ ನ ತ್ರಿವಿಧಜೀವಾನಾಮೇಕಪ್ರಕಾರೇಣ ಕಿಂತು ತತ್ತದ್ಯೋಗ್ಯತಾಮರ್ಯಾದಯಾ ಇತ್ಯಾಹ - **ತಾಮಿತಿ** । ಯಾಽಹಂ **ಪುರುತ್ರಾ** = ಪುರೂಣಿ ಬ್ರಹ್ಮಾದಿಜಗಂತಿ ಪಾಲಯಂತೀ ತಾಂ, **ಮಾ** = ಮಾಂ,

---

ಚಿಕಿತುಷೀ - 'ಕಿತ ನಿರ್ಮಾಣೇ' ಜಗನ್ನಿರ್ಮಾತ್ರೀತ್ಯರ್ಥಃ । ಕಿತಶಬ್ದೋ ಜ್ಞಾನಪರ್ಯಾಯಃ । ಜ್ಞಾನವತೀ ಸರ್ವಜ್ಞಾ ಇತಿ ವಾ । ಯಜ್ಞಿಯಾನಾಂ ವಸೂನಾಂ ಸಂಗಮನೀ ಇತಿ ವಾ ಸಂಬಂಧಃ । **ತಾಮ್** - ಏವಮುಕ್ತಗುಣವಿಶಿಷ್ಟಾಮ್ । **ಭೂರಿಸ್ಥಾತ್ರೀಮ್**- ಭೂರಿ-ಬಹುಭಾವೇನ ಬಹುರೂಪತಯಾ ಸ್ಥಾತ್ರೀಮ್ - ತಿಷ್ಠಂತೀಮ್ । ಙೀಪ್ ವ್ಯತ್ಯಯಶ್ಛಾಂದಸಃ । ದುರ್ಗೇತಿ ಅಂಬಿಕೇತಿ ಚಂಡಿಕೇತಿ ನಾನಾರೂಪವತ್ತ್ವೇನ ವರ್ತಮಾನಾಮ್ । ಕಿಂ ದುರ್ಗಾಂಬಿಕಾದಿನಾಮಕ-ಜೀವಾಂತರೈಕ್ಯೇನ ತಥಾ ವರ್ತತೇ ನೇತ್ಯಾಹ । ಭೂರಿ - ಭೂರೀಣಿ ಬಹೂನಿ ದುರ್ಗಾಽಂಬಿಕಾ ಭೈರವೀಕಾಲೀತ್ಯಾದಿರೂಪೇಣ ಬಹುಧಾ ವಿದ್ಯಮಾನಭೂತಜಾತಾನಿ ಆವೇಶಯಂತೀಮ್, ಸ್ವಾರ್ಥೇ ಣಿಚ್, ಆವಿಶಂತೀಮಿತ್ಯರ್ಥಃ । ತತ್ತನ್ನಾಮಕಜೀವಾನಾಂ ತತ್ರ ತತ್ರ ಸ್ಥಾನವಿಶೇಷೇಷು ಆವೇಶಯಂತೀಮ್, ಸನ್ನಿಧಿಂ ಕಾರಯಂತೀಮಿತಿ ವಾ । ಪ್ರಥಮಾ ಚಿಕಿತುಷೀ ಅನಾದಿತಃ ಸರ್ವತ್ರ ಕೃತನಿವಾಸಾ ವಾ । 'ಕಿತ-ನಿವಾಸೇ' ಇತಿ ಪಠಂತಿ । ತಾಮ್, ಮಾ-ಮಾಮ್, ಪುರುತ್ರಾ - 'ದೇವಪುರುಮರ್ತ್ಯೇಭ್ಯೋ ದ್ವಿತೀಯಾಸಪ್ತಮ್ಯೋರ್ಬಹುಲಮ್' ಇತಿ ಸಪ್ತಮ್ಯಾಸ್ತ್ರಾದೇಶಃ । ಪುರುಷು ದೇಶೇಷು ಕರವೀರಪ್ರಭೃತಿಷು ದೇವಾಃ ವ್ಯದಧುಃ । ಲಡರ್ಥೇ ಲುಙ್, ವಿದಧತಿ ನಾನಾವಿಧಜನೈಃ ಪೂಜ್ಯತಯಾ ಕುರ್ವಂತೀತ್ಯರ್ಥಃ । ತದುಕ್ತಂ ದಶಮಸ್ಕಂಧೇ- '........ದೇವೀ ಮಾಯಾ ಭಗವತೀ । ಬಹುನಾಮನಿಕೇತೇಷು ಬಹುನಾಮಾ ಬಭೂವ ಹ ||' - ಶ್ರೀರಾಘ.ವ್ಯಾ.

೧. ರಾಷ್ಟ್ರೀ - ರಾಜ್ಞೀ 'ಯಜ್ಞಿಯಾನಾಂ - ಯಜ್ಞಾರ್ಹಾಣಾಂ ವಸೂನಾಂ - ಪದಾರ್ಥಾನಾಂ ದೇವಾನಾಂ ವಾ; ಸಂಗಮನೀ - ಸಂಗಮಯಿತ್ರೀ; ಪ್ರಥಮಾ ಚಿಕಿತುಷೀ । ಅನಾದಿತಃ ಸರ್ವತ್ರ ಕೃತನಿವಾಸಾ; ಪುರುಸ್ಥಾನೇಷು; ವ್ಯದಧುಃ - ಕೃತವಂತಃ । ಪೂಜಾರ್ಥಂ ಪ್ರತಿಷ್ಠಾಪಿತವಂತಃ । ಭೂರಿಸ್ಥಾತ್ರಾಂ - ಸ್ವತೋ ಭೂರಿಸ್ಥಾನೇಷು ಸ್ಥಿತಾಂ ಭೂರಿಸ್ಥಾನೇಷು ದೇವಾನಾವೇಶ- ಯಂತಿಮ್||
- ಇತಿ ಪ್ರಮೇಯದೀಪಿಕಾಯಾಮ್ (೧೨/೨)

ದೇವಾಃ [1]ಭೂರಿಸ್ಥಾತ್ರಾಮ್ । ಭೂರೀಣಿ ದ್ರವ್ಯಾಣೀ ಸ್ಥಾತ್ರೀಂ ಸ್ಥಾಪಯಂತೀಂ, ಸ್ಥಿರೀಕುರ್ವಾಣಾಂ **ಭೂರಿ** = ಬಹುವಿಧದ್ರವ್ಯಂ; **ಆ** = ತೇಷಾಂ ತೇಷಾಂ ಯೋಗ್ಯತಾಮರ್ಯಾದಯಾ **ವೇಶಯಂತೀಂ** = ತತ್ತದ್ಗೃಹೇ ಪ್ರವೇಶಯಂತೀಂ; ಉತ್ತಮಾನಾಂ ಗೃಹೇ ಚಿರಕಾಲಸ್ಥಾಯಿ, ಅಧಮಾನಾಮಲ್ಪಕಾಲಸ್ಥಾಯಿ, ಮಿಶ್ರಾಣಾಮುಭಯವಿಧಂ ಚ ವೇಶಯಂತೀಮಿತ್ಯರ್ಥಃ। **ವ್ಯದಧುಃ** = ಕೃತವಂತಃ।

''ಋತೇ ಭವತ್ಪಾದಪರಾಯಣಂ ನ ಮಾಂ
ವಿದಂತ್ಯಹಂ ತ್ವದ್ಧೃದಯಾ ಯತೋಽಜಿತ'' (ಭಾ.೫.೧೮;೨೨)

ಇತಿ ಭಾಗವತೋಕ್ತಸ್ವಾಭಿಪ್ರಾಯಂ ಸ್ಫೋರಯಿತುಂ 'ಆ' ಇತ್ಯುಪಸರ್ಗಃ॥೩॥

